ಕರ್ನಾಟಕ ಸರ್ಕಾರ

# ಕನ್ನಡ ಅಭ್ಯಾಸ ಪುಸ್ತಕ

## ಭಾಗ–2

# 8

## ಎಂಟನೆಯ ತರಗತಿ

## 2020–21

**ಹೆಸರು :** ..............................................................

**ಶಾಲೆಯ ಹೆಸರು :** ..............................................................

..............................................................

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 560 085.

# ಮುನ್ನುಡಿ

ಈ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳ ಗುರಿಗಳು ಮಕ್ಕಳು ಅತ್ಯವಶ್ಯಕವಾದ ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳಲು ಸಹಾಯಕವಾಗುತ್ತವೆ. ಭಾಷೆಗಳಲ್ಲಿ ಭಾಷಾಕಲಿಕೆಯ ಕೌಶಲಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು, ಆಕರಗ್ರಂಥಗಳಿಂದ ಮಾಹಿತಿ ಸಂಗ್ರಹಿಸುವುದು, ಇತ್ಯಾದಿ ಕೌಶಲಗಳಿಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಈ ಚಟುವಟಿಕೆಗಳನ್ನು ತರಗತಿಗಳಲ್ಲಿ, ತರಗತಿಯ ನಂತರ ಅಥವಾ ಮನೆಯಲ್ಲಿ ಮಾಡಬಹುದಾಗಿದೆ. ಯಾವುದೇ ವಿಷಯಕ್ಕೆ ನೇರ ವ್ಯಾಖ್ಯೆಯನ್ನು ನೀಡದೆ ಆಕರ್ಷಕ ಚಿತ್ರ, ಓದು, ಬರಹದ ಮೂಲಕ ಮಕ್ಕಳು ಅದನ್ನು ಅರ್ಥೈಸಿಕೊಳ್ಳುವಂತೆ ಸರಳವಾಗಿ ರೂಪಿಸಲಾಗಿದೆ. ಸಮೀಕ್ಷೆ ಆಧಾರಿತ ಸಾಧನ ಪರೀಕ್ಷೆಗಳಾದ NAS ಮತ್ತು CSAS ಗಳ ಫಲಿತಾಂಶಗಳನ್ನು ವಿಶ್ಲೇಷಿಸಿದ್ದು, ಇದರಲ್ಲಿ ಮಕ್ಕಳ ಸಾಧನೆಯನ್ನು ಉತ್ತಮಪಡಿಸಲು ಸೂಕ್ತ ಚಟುವಟಿಕೆಗಳನ್ನು ಸೇರ್ಪಡಿಸಿದೆ.

ಇಲ್ಲಿ ನೀಡಿರುವ ಚಟುವಟಿಕೆಗಳೇ ಅಂತಿಮವಲ್ಲ. ಕಲಿಕೆಗೆ ಸಂಬಂಧಿಸಿದಂತೆ ಪರಿಸರದಲ್ಲಿನ ಅಂಶಗಳನ್ನು ಆಧರಿಸಿ ಕಲಿಯಲು ಮಗುವಿಗೆ ಮುಕ್ತ ಅವಕಾಶ ನೀಡಬೇಕು. ಮಗು ಮಾಡಿದ ಚಟುವಟಿಕೆಗಳನ್ನು ಗಮನಿಸಿ ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗಿದೆ. ಈ ಅಭ್ಯಾಸ ಪುಸ್ತಕಗಳ ಬಳಕೆ ಹಾಗೂ ಮೌಲ್ಯಮಾಪನ ಕಾರ್ಯಕ್ಕಾಗಿ ತಂತ್ರಾಂಶವನ್ನು (APP) ಸಿದ್ಧಪಡಿಸಲಾಗಿದೆ. ಶಿಕ್ಷಕರು ಈ ತಂತ್ರಾಂಶವನ್ನು ಬಳಸಿ ಮಕ್ಕಳ ಕಲಿಕಾ ಪ್ರಗತಿಯನ್ನು ದಾಖಲಿಸಬೇಕು. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕ್ಷೇತ್ರ ಮಟ್ಟದ ಅಧಿಕಾರಿಗಳಿಂದ ಪಡೆದುಕೊಳ್ಳುವುದು.

ಪ್ರತಿ ಅಭ್ಯಾಸ ಪುಸ್ತಕವನ್ನು ಎರಡು ಭಾಗಗಳಲ್ಲಿ ರಚಿಸಲಾಗಿದ್ದು ಮೊದಲ ಅರ್ಧವಾರ್ಷಿಕ ಅವಧಿಯಲ್ಲಿ ಭಾಗ – 1 ನ್ನು ಈಗಾಗಲೇ ಮಕ್ಕಳಿಗೆ ವಿತರಿಸಲಾಗಿದೆ. ಅಭ್ಯಾಸ ಪುಸ್ತಕವನ್ನು ಮಕ್ಕಳು ಬಳಸುತ್ತಿದ್ದು, ಅವರ ಪ್ರಗತಿಯನ್ನು ತಂತ್ರಾಂಶದಲ್ಲಿ ದಾಖಲಿಸುತ್ತಿದ್ದೀರೆಂದು ಭಾವಿಸಿದ್ದೇನೆ. ಈಗ ಎರಡನೇ ಅರ್ಧವಾರ್ಷಿಕ ಅವಧಿಯಲ್ಲಿ ಭಾಗ – 2 ಅಭ್ಯಾಸ ಪುಸ್ತಕವನ್ನು ನೀಡಲಾಗಿದೆ. ಘಟಕದ ಅಂತ್ಯದಲ್ಲಿ ಕಿರು ಪರೀಕ್ಷೆಯನ್ನು (Micro test) ನೀಡಿದ್ದು, ಸ್ವ ಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳಿಗೆ ಸ್ವ ಮೌಲ್ಯಮಾಪನ ಸಾಧನವನ್ನು ನೀಡಿದೆ.

ಶ್ರೇಣೀಕರಿಸಿದ ಅಭ್ಯಾಸಗಳನ್ನು ಈ ಅಭ್ಯಾಸ ಪುಸ್ತಕದಲ್ಲಿ ನೀಡಿದ್ದು, ಈ ಅಭ್ಯಾಸಗಳು ವೈವಿಧ್ಯತೆಯಿಂದ ಕೂಡಿವೆ. ಹೆಚ್ಚಿನ ಅಭ್ಯಾಸಗಳು ಗಳಿಸಿದ ಜ್ಞಾನವನ್ನು ಜೀವನದಲ್ಲಿ ಅಳವಡಿಸುವಂತಹವುಗಳಾಗಿವೆ. ಈ ಅಭ್ಯಾಸ ಪುಸ್ತಕಗಳಲ್ಲಿ ಶಿಕ್ಷಕರಿಗೆ ಚಟುವಟಿಕೆಗಳೊಂದಿಗೆ ಸೂಚನೆಗಳನ್ನು ನೀಡಿದ್ದು ಶಿಕ್ಷಕರು ಅವುಗಳನ್ನು ಓದಿ ತರಗತಿಯಲ್ಲಿ ಮಕ್ಕಳ ಕಲಿಕೆಗೆ ಅತ್ಯವಶ್ಯಕವಾದ ಸನ್ನಿವೇಶಗಳನ್ನು ಒದಗಿಸಿಕೊಡಬೇಕು. ಇದೇ ರೀತಿಯ ಚಟುವಟಿಕೆಗಳನ್ನು ಗೃಹ ಪಾಠ ನೀಡುವಾಗ ಕೊಡುವುದು ಉತ್ತಮ.

ಅಭ್ಯಾಸ ಪುಸ್ತಕಗಳ ರಚನೆಯಲ್ಲಿ ಸಹಕರಿಸಿದ ಅಕ್ಷರ ಫೌಂಡೇಶನ್, ಪ್ರಥಮ್ ಸಂಸ್ಥೆ, ಶಿಕ್ಷಣ ಫೌಂಡೇಶನ್, ಬಯೋಕಾನ್ ಫೌಂಡೇಶನ್‌ರವರು ಸೇರಿದಂತೆ ಸರ್ವಶಿಕ್ಷಣ ಅಭಿಯಾನ, ಕರ್ನಾಟಕ ಪಠ್ಯಪುಸ್ತಕ ಸಂಘ ಹಾಗೂ ರಚನಾ ಸಮಿತಿಯವರಿಗೆ ಡಿ.ಎಸ್.ಇ.ಆರ್.ಟಿ ಆಭಾರಿಯಾಗಿದೆ.

ಈ ಅಭ್ಯಾಸ ಪುಸ್ತಕಗಳನ್ನು ವಿದ್ಯಾರ್ಥಿಗಳು ನಿರೀಕ್ಷಿತ ಉದ್ದೇಶಕ್ಕೆ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕೆಂಬುದು ನಮ್ಮ ಆಶಯ. ಆಗ ನಿಜವಾದ ಅರ್ಥದಲ್ಲಿ ಗುಣಮಟ್ಟದ ಶಿಕ್ಷಣವನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತದೆ ಎಂದು ಆಶಿಸುತ್ತೇನೆ.

**ಎಸ್.ಆರ್.ಉಮಾಶಂಕರ್** ಭಾ.ಆ.ಸೇ

ಪ್ರಧಾನ ಕಾರ್ಯದರ್ಶಿಗಳು

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ

ಬೆಂಗಳೂರು

**ದಿನಾಂಕ : 11–03–2019**

ಬೆಂಗಳೂರು



# ಕಲಿಕಾ ಫಲಗಳು (Learning Outcomes)

ಈ ತರಗತಿಯಲ್ಲಿ ವಿದ್ಯಾರ್ಥಿಗಳು ಕೆಳಗಿನ ಕಲಿಕಾ ಫಲಗಳನ್ನು ಗಳಿಸಿಕೊಳ್ಳಲು ನಿರೀಕ್ಷಿಸಲಾಗಿದೆ. ಅಭ್ಯಾಸ ಪುಸ್ತಕಗಳ ಸಮರ್ಪಕ ಬಳಕೆಯ ಮೂಲಕ ಮಕ್ಕಳು ಈ ಕಲಿಕಾ ಫಲಗಳನ್ನು ಸಾಧಿಸಲು ಶಿಕ್ಷಕರು ಸಹಕರಿಸಲು ಕೋರಿದೆ. ಶಿಕ್ಷಕರ ಅಭಿಪ್ರಾಯ ಸೂಚಿಸುವ ಭಾಗದಲ್ಲಿ ಮೂರು ಶ್ರೇಣಿಗಳಾದ ***'ಅತ್ಯುತ್ತಮ', 'ಉತ್ತಮ'*** ಹಾಗೂ ***'ಸಾಧಾರಣ'*** ಶ್ರೇಣಿಗಳನ್ನು ಪ್ರತಿ ಘಟಕದ/ಪಾಠದ ನಂತರ ನೀಡಿರುವ ಪಟ್ಟಿಯಲ್ಲಿ ದಾಖಲಿಸಬೇಕು. ಇದು ವಿದ್ಯಾರ್ಥಿಗಳು ಕಲಿಕಾ ಫಲಗಳನ್ನು ಗಳಿಸಿಕೊಂಡಿರುವ ಹಂತವನ್ನು ಸೂಚಿಸುತ್ತದೆ.

**ಎಂಟನೆಯ ತರಗತಿ ಕನ್ನಡ ವಿಷಯದ ಕಲಿಕಾ ಫಲಗಳು:**

- ನಾಟಕ, ರೂಪಕ ಹಾಗೂ ಪ್ರಹಸನಗಳನ್ನು ವೀಕ್ಷಿಸಿ, ಆಲಿಸಿ ಅರ್ಥಮಾಡಿಕೊಳ್ಳುವಿರಿ.
- ಅಪರಿಚಿತ ಸನ್ನಿವೇಶಗಳಲ್ಲಿನ ಘಟನೆ ಹಾಗೂ ಸಂದರ್ಭಗಳನ್ನು ಅರ್ಥಮಾಡಿಕೊಂಡು ಸೂಕ್ತ ಪ್ರತಿಕ್ರಿಯೆ ವ್ಯಕ್ತಪಡಿಸುವಿರಿ.
- ಕಾರ್ಯಕಾರಣ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಪುನರುಚ್ಚರಿಸುವಿರಿ.
- ಚರ್ಚೆ ಮತ್ತು ಸಂವಾದಗಳಲ್ಲಿನ ದೋಷಪೂರಿತ ಭಾಷೆಯನ್ನು ಪರಿಣಾಮಕಾರಿಯಾಗಿ ನಿವಾರಿಸುವ ಪ್ರೌಢಿಮೆಯನ್ನು ಬೆಳೆಸಿಕೊಳ್ಳುವಿರಿ.
- ಅಪರಿಚಿತ ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿರರ್ಗಳವಾಗಿ ಹಾಗೂ ಸ್ಪಷ್ಟವಾಗಿ ಮಾತನಾಡುವುದನ್ನು ಕಲಿಯುವಿರಿ.
- ಪದಭಂಡಾರವನ್ನು ಹೆಚ್ಚಿಸಿಕೊಂಡು, ಸ್ಪಷ್ಟ ಉಚ್ಚಾರಣೆಯೊಂದಿಗೆ ವಾಕ್ಯಗಳನ್ನು ಓದುವ ಮತ್ತು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಿರಿ.
- ಸರಳ ಟಿಪ್ಪಣಿ ಸಣ್ಣ ಪ್ರಬಂಧಗಳನ್ನು ವ್ಯಾಕರಣ ದೋಷವಿಲ್ಲದೇ ಬರೆಯುವುದನ್ನು ಕಲಿಯುವಿರಿ.
- ತಮ್ಮ ಕಲ್ಪನೆ ಮತ್ತು ಸೃಜನಶೀಲತೆ ಬಳಸಿ ಸ್ವರಚಿತ ಪದ್ಯ, ಕಥೆ, ನಾಟಕ ಇತ್ಯಾದಿ ಬರೆಯುವಿರಿ.
- ಭಾಷಾ ನಿಯಮಗಳಿಗನುಸಾರವಾಗಿ ಛಂದಸ್ಸು, ಅಲಂಕಾರಗಳ ಮೂಲ ಅಂಶಗಳನ್ನು ಗುರುತಿಸಿ ಬರೆಯುವುದನ್ನು ಕಲಿಯುವಿರಿ.

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| | ಮುನ್ನುಡಿ | ii |
| | ಕಲಿಕಾ ಫಲಗಳು | iii |
| 1. | ಸಮಾಸಗಳು | 1–4 |
| 2. | ಗಾದೆ ಮಾತು | 5–8 |
| 3. | ಛಂದಸ್ಸು | 9–15 |
| 4. | ಅಲಂಕಾರ | 16–20 |
| 5. | ಕಿರುಪರೀಕ್ಷೆ–1 | 21–22 |
| 6. | ಓದೋಣ ಬನ್ನಿ | 23–28 |
| 7. | ಕಥೆ ಕಟ್ಟೋಣ | 29–32 |
| 8. | ಪತ್ರ ಲೇಖನ | 33–41 |
| 9. | ಕಿರುಪರೀಕ್ಷೆ–2 | 42–43 |
| 10. | ಪ್ರಬಂಧ ರಚನೆ | 44–47 |
| 11. | ಭಾಷಾ ವಿನೋದ | 48–57 |
| 12. | ಕಿರುಪರೀಕ್ಷೆ–3 | 58–60 |


**ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶಗಳು :**

* ಈ ಅಭ್ಯಾಸ ಪುಸ್ತಕದ ಪ್ರತಿ ಪುಟವನ್ನು ದಿನಕ್ಕೊಂದರಂತೆ ಅಭ್ಯಾಸ ಮಾಡಬೇಕು.
* ಅಭ್ಯಾಸ ಪುಸ್ತಕದಲ್ಲಿ ಒಂದು ಪುಟ ಪೂರ್ಣಗೊಳಿಸಿದ ನಂತರವೇ ಮುಂದಿನ ಪುಟಕ್ಕೆ ಹೋಗಬೇಕು.
* ಚಟುವಟಿಕೆಗಳು ಅರ್ಥವಾಗದಿದ್ದಲ್ಲಿ ಸ್ನೇಹಿತರ/ಶಿಕ್ಷಕರ ಸಹಾಯ ಪಡೆಯುವುದು.
* ಸ್ವಯಂ ಮೌಲ್ಯಮಾಪನ ಪುಟದಲ್ಲಿ ನಿಮಗಿಷ್ಟವಾದ ಚಟುವಟಿಕೆಗಳಿಗೆ '☺' ಸಂಕೇತವನ್ನು, ಭಾಗಶಃ ಇಷ್ಟವಾಗಿದ್ದಲ್ಲಿ '😐' ಸಂಕೇತವನ್ನು ಅಥವಾ ಇಷ್ಟವಾಗದೇ ಇದ್ದಲ್ಲಿ '☹' ಸಂಕೇತವನ್ನು ಗುರುತಿಸಬೇಕು.

❖ ❖ ❖

# 1. ಸಮಾಸಗಳು

**ಅ) ಈ ಕೆಳಗಿನ ಪದಗಳನ್ನು ಕೂಡಿಸಿ ಒಂದೇ ಪದ ಬರೆಯಿರಿ.**

1. ಅರಸನ + ಮನೆ = ____________________
2. ಹಿರಿಯದಾದ + ತೊರೆ = ____________________
3. ಕೈಯನ್ನು + ತೊಳೆ = ____________________
4. ಮರದ + ಕಾಲು = ____________________
5. ಬೆಟ್ಟದ + ತಾವರೆ = ____________________
6. ಕಣ್ಣಿನಿಂದ + ಕೆಡು = ____________________

**ಆ) ಈ ಕೆಳಗಿನ 'ಸಮಾಸ' ಪದಗಳನ್ನು ಬಿಡಿಸಿ ಬರೆಯಿರಿ.**

1. ತಲೆನೋವು = ____________________
2. ಹೆಮ್ಮರ = ____________________
3. ಬೆಳ್ಮೋಡ = ____________________
4. ಒಗ್ಗಟ್ಟು = ____________________
5. ಹಿಂದಲೆ = ____________________

**ಇ) ಈ ಕೆಳಗಿನ ಸಮಾಸ ಪದಗಳನ್ನು ಅರ್ಥಪೂರ್ಣವಾಗಿ ಬಿಡಿಸಿ ಸಮಾಸದ ಹೆಸರು ಬರೆಯಿರಿ.**

1. ಕೆರೆ ಕಟ್ಟೆ ಬಾವಿಗಳು = ________________ ________________
2. ನಡುದಾರಿ = ________________ ________________
3. ಏಕಾಕ್ಷ = ________________ ________________
4. ಹಳಗನ್ನಡ = ________________ ________________
5. ಬೆಟ್ಟದಾವರೆ = ________________ ________________

**ಈ) ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕಿರುವ ಸಂಬಂಧ ಪದ ಬರೆಯಿರಿ.**

1. ಅವನು + ಹುಡುಗ = ಆ ಹುಡುಗ :: ಇದು + ನಾಯಿ = ______________
2. ಕೈಯ + ಮುಂದು = ಮುಂಗೈ :: ದಾರಿಯ + ನಡುವೆ = ______________
3. ಕಾರ್ಯವನ್ನು + ಮಾಡಿದ = ಕಾರ್ಯಮಾಡಿದ :: ಮೈಯನ್ನು + ತೊಳೆದು = ______________
4. ಇನಿದು + ಮಾವು = ಇಮ್ಮಾವು :: ಹಿರಿದು + ಮರ = ______________
5. ಕಾಲಿನ + ಬಳೆ = ಕಾಲ್ಬಳೆ :: ಕಣ್ + ಪನಿ = ______________

**ಉ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

1. ತತ್ಪುರುಷ, ಸವರ್ಣದೀರ್ಘ, ದ್ವಂದ್ವ, ದ್ವಿಗು [ ]
2. ದೇವಮಂದಿರ, ಹಗಲುಗನಸು, ಹಿರಿಮಗ, ತಲೆನೋವು [ ]
3. ಗಿರಿವನ, ಹಿಂದಲೆ, ಅಂಗೈ, ಕೆಳದುಟಿ [ ]
4. ಆ ಕಲ್ಲು, ಆ ಮನೆ, ಅರಮನೆ, ನೆಯ್ದುವಸ್ತ್ರ [ ]
5. ಹೆಬ್ಬಾವು, ಕಾರ್ಮೋಡ, ದೇವಮಂದಿರ, ಮೆಲ್ನುಡಿ [ ]

**ಊ) ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ | | ಉತ್ತರ |
|---|---|---|---|
| 1. ಏಕೋನ | 1. ದ್ವಂದ್ವ | = | ______________ |
| 2. ಈ ಶಾಲೆ | 2. ಬಹುವ್ರೀಹಿ | = | ______________ |
| 3. ಗಜಾನನ | 3. ಕ್ರಿಯಾ | = | ______________ |
| 4. ತಂದೆತಾಯಿ | 4. ಗಮಕ | = | ______________ |
| 5. ಶಿರಬಾಗು | 5. ದ್ವಿಗು | = | ______________ |

ಋ) ಮೊದಲೆರಡು ಪದಗಳ ಸಂಬಂಧದಂತೆ ಮೂರನೆಯ ಪದದ ಸಂಬಂಧ ಬರೆಯಿರಿ.

1. ಅಂಬುಜ: ಬಹುವ್ರೀಹಿ :: ಕೈಚಾಚು = ______
2. ಕೆಂದಾವರೆ: ಕರ್ಮಧಾರಯ :: ಪಂಚತಂತ್ರ = ______
3. ರಾಜೀವಸಖ: ಬಹುವ್ರೀಹಿ :: ದ್ವಿದಳ = ______
4. ಹಳಗನ್ನಡ: ಕರ್ಮಧಾರಯ :: ಈ ಮನೆ = ______
5. ಕಣ್ಣಿನ+ಒಳಗೆ = ಒಳಗಣ್ಣು :: ಕಪ್ಪನೆಯ+ನಾಡು = ______

ಎ) ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.

1. ಮೈಮುಟ್ಟಿ, ತಲೆಬಾಗಿ, ಕರವಸ್ತ್ರ, ಕೈಯಾನು [ ]
2. ತತ್ಪುರುಷ, ದ್ವಿಗು, ಆಗಮ, ದ್ವಂದ್ವ [ ]
3. ಒಗ್ಗಾಲಿ, ಏಕೋನ, ಮುಕ್ಕಣ್ಣ, ಮುಕ್ಕಣ್ಣು [ ]
4. ಬೆಟ್ಟದಾವರೆ, ಕಾರ್ಮೋಡ, ಬೆಳ್ಗೊಡೆ, ಹಳಗನ್ನಡ [ ]
5. ಹಣೆಗಣ್ಣ, ಮುಕ್ಕಣ್ಣ, ಚಕ್ರಪಾಣಿ, ಮೆಲ್ಲಾತು [ ]
6. ಲೋಪಸಂಧಿ, ಗುಣಸಂಧಿ, ಆಗಮಸಂಧಿ, ಆದೇಶಸಂಧಿ [ ]
7. ದೇವಾಲಯ, ಮನದಾಳ, ದೇವಾಸುರ, ಗುರುವನ್ನು [ ]

ಏ) (1) 'ಸಂಧಿ' ಎಂದರೇನು?

______

______.

(2) 'ಸಮಾಸ' ಎಂದರೇನು?

______

______.

**ಐ) ಕನ್ನಡದಲ್ಲಿ ಒಟ್ಟು ಎಷ್ಟು ಸಮಾಸಗಳಿವೆ ಮತ್ತು ಅವುಗಳನ್ನು ಪಟ್ಟಿ ಮಾಡಿ. ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆ ಕೊಡಿ.**

| | | |
|---|---|---|
| 1) ____________ | ಉದಾ: | 1) ____________ |
| 2) ____________ | | 2) ____________ |
| 3) ____________ | | 3) ____________ |
| 4) ____________ | | 4) ____________ |
| 5) ____________ | | 5) ____________ |
| 6) ____________ | | 6) ____________ |
| 7) ____________ | | 7) ____________ |
| 8) ____________ | | 8) ____________ |

**ಒ) ಈ ಕೆಳಗೆ ಕೊಟ್ಟಿರುವ ಸಮಾಸ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**

1. ಯಜ್ಞತುರಗ = ____________ ____________
2. ಬಾಯುಪಚಾರ = ____________ ____________
3. ಸವಿಗೂಳು = ____________ ____________
4. ಮೃಷ್ಟಾನ್ನ = ____________ ____________
5. ಏಕಾಕ್ಷರೀ = ____________ ____________
6. ಮೂಜಗ = ____________ ____________
7. ಪಂಚಾಕ್ಷರೀ = ____________ ____________
8. ಚಳಿಗಾಲ = ____________ ____________
9. ಸಪ್ತಾಕ್ಷರೀ = ____________ ____________
10. ಮುಕ್ಕಣ್ಣ = ____________ ____________
11. ಕೆಂದಾವರೆ = ____________ ____________

# 2. ಗಾದೆ ಮಾತು

**ಅ. ಈ ಕೆಳಗಿನ ಗಾದೆ ಮಾತುಗಳನ್ನು ಪೂರ್ಣಗೊಳಿಸಿ.**

1. ಕೈ ಕೆಸರಾದರೆ ____________
2. ಹಾಸಿಗೆ ಇದ್ದಷ್ಟು ____________
3. ಬೆಳೆಯುವ ಸಿರಿ ____________
4. ದೇಶ ಸುತ್ತು ____________
5. ಕುಂಬಾರನಿಗೆ ವರ್ಷ ____________

**ಆ. ನೀವು ಪೂರ್ಣಗೊಳಿಸಿದ ಗಾದೆಗಳ ಸಹಾಯದಿಂದ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ದುಡಿಮೆಯ ಮಹತ್ವ ತಿಳಿಸುವ ಗಾದೆ ಬರೆಯಿರಿ.
2. ಮಿತ ಬಳಕೆ, ಮಿತವಾದ ಖರ್ಚು ಮತ್ತು ಸರಳ ಜೀವನದ ಮಹತ್ವ ತಿಳಿಸುವ ಗಾದೆ.
3. ಜ್ಞಾನ ಗಳಿಸುವ ಮಾರ್ಗ ತಿಳಿಸುವ ಗಾದೆ
4. ಬಾಲ್ಯ ಜೀವನ ಮಹತ್ವ ತಿಳಿಸುವ ಗಾದೆ.
5. ಸುಂದರ ನಿರ್ಮಾಣದ ಹಿಂದಿರುವ ಶ್ರಮದ ಮಹತ್ವ ತಿಳಿಸುವ ಗಾದೆ.

**ಇ. ಕೆಳಗಿನ ಗಾದೆಗಳು ನೀಡುವ ನೀತಿ/ಸಂದೇಶಗಳನ್ನು ಆವರಣದಲ್ಲಿನ ನೀತಿಪದಗಳ ಸಹಾಯದಿಂದ ಗುರುತಿಸಿ ಬರೆಯಿರಿ.**

| |
|---|
| ಮರ್ಯಾದೆ ಮುಖ್ಯ, ಅತಿ ಆಸೆ ಒಳ್ಳೆಯದಲ್ಲ, ಅಸಹಾಯಕತೆ, ಪ್ರತಿಯೊಬ್ಬರಿಗೂ ಒಂದು ಕಾಲ ಕೂಡಿಬರುತ್ತದೆ, ಉಪಕಾರ ಸ್ಮರಣೆ, ಹಿರಿಯರು ಕಿರಿಯರಿಗೆ ಮಾದರಿ, ಜ್ಞಾನಿಯ ದೊಡ್ಡ ಗುಣ, ಅಹಂಕಾರ. |

1. ಬಡವನ ಕೋಪ ದವಡೆಗೆ ಮೂಲ.

   ಸಂದೇಶ/ನೀತಿ: ____________________

2. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

   ಸಂದೇಶ/ನೀತಿ: ____________________

3. ಅತಿ ಆಸೆ ಗತಿ ಕೇಡು

   ಸಂದೇಶ/ನೀತಿ: ____________________

4. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ

   ಸಂದೇಶ/ನೀತಿ: ____________________

5. ಅನ್ನ ಹಾಕಿದ ಮನೆಗೆ ಕನ್ನ ಹಾಕಬಾರದು

   ಸಂದೇಶ/ನೀತಿ: ____________________

6. ತುಂಬಿದ ಕೊಡ ತುಳುಕುವುದಿಲ್ಲ.

   ಸಂದೇಶ/ನೀತಿ: ____________________

7. ತಾಯಿಯಂತೆ ಮಗಳು, ನೂಲಿನಂತೆ ಸೀರೆ.

   ಸಂದೇಶ/ನೀತಿ: ____________________

8. ಅಲ್ಪ ವಿದ್ಯಾ ಮಹಾ ಗರ್ವಿ.

   ಸಂದೇಶ/ನೀತಿ: ____________________

**ಈ) ಗಾದೆ ಮಾತಿನ ಅರ್ಥವನ್ನು ವಿವರಿಸಿ.**

1. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ?

_______________________________________________

_______________________________________________

_______________________________________________

_______________________________________________

_______________________________________________

2. ಇಬ್ಬರ ಜಗಳ ಮೂರನೆಯವನಿಗೆ ಲಾಭ.

_______________________________________________

_______________________________________________

_______________________________________________

_______________________________________________

_______________________________________________

3. ಮನಸ್ಸಿದ್ದರೆ ಮಾರ್ಗ.

_______________________________________________

_______________________________________________

_______________________________________________

_______________________________________________

_______________________________________________

4. ಮಾಡಿದ್ದುಣ್ಣೋ ಮಹಾರಾಯ.

_______________________________________________

_______________________________________________

_______________________________________________

_______________________________________________

_______________________________________________

5. ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು

_______________________________________________

_______________________________________________

_______________________________________________

_______________________________________________

_______________________________________________

6. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ.

_______________________________________________

_______________________________________________

_______________________________________________

_______________________________________________

_______________________________________________

****

# 3. ಛಂದಸ್ಸು

## ಅ. ಸೂಕ್ತ ಉತ್ತರ ಆರಿಸಿ ಬರೆಯಿರಿ.

1. 'ಛಂದ' ಪದದ ಅರ್ಥ ಇದು

   1) ವಂದ 2) ಅಂದ 3) ನಂದ 4) ನಂದಿ

2. 'ಅಂದ' ಪದದ ಅರ್ಥ ಇದು.

   1) ಸುಂದರ 2) ಬಂದ 3) ಮಂದ 4) ಅಂಧ

3. ಕಾವ್ಯದ ಸೌಂದರ್ಯ ಹೆಚ್ಚಿಸಲು ಬೇಕಾದ ಶಾಸ್ತ್ರ ಇದು.

   1) ಛಂದಃಶಾಸ್ತ್ರ 2) ಭೌತಶಾಸ್ತ್ರ 3) ತರ್ಕಶಾಸ್ತ್ರ 4) ಜೀವಶಾಸ್ತ್ರ

4. ಪದ್ಯದ ಸಾಲುಗಳನ್ನು ಹೀಗೆನ್ನುವರು.

   1) ಪದ 2) ಪಾದ 3) ಗೆರೆ 4) ವಾಕ್ಯ

5. ಮೂರು ಸಾಲಿರುವ ಪದ್ಯಕ್ಕೆ ಹೀಗೆನ್ನುವರು.

   1) ದ್ವಿಪದಿ 2) ತ್ರಿಪದಿ 3) ಚೌಪದಿ 4) ಷಟ್ಪದಿ

6. ಆರು ಸಾಲಿರುವ ಪದ್ಯಕ್ಕೆ ಹೀಗೆನ್ನುವರು.

   1) ದ್ವಿಪದಿ 2) ತ್ರಿಪದಿ 3) ಷಟ್ಪದಿ 4) ಕಂದ

7. ಗುರು ಚಿಹ್ನೆ (__) ಹಾಕಬೇಕಾದ ಅಕ್ಷರ ಇದು.

   1) ಅ 2) ಕಃ 3) ದ 4) ದೊ

8. ಒಂದು ಮಾತ್ರಾಕಾಲವನ್ನು ಗುರುತಿಸುವ ಚಿಹ್ನೆ ಇದು.

   1) _ 2) X 3) U 4) V

9. ಎರಡು ಮಾತ್ರಾಕಾಲದಲ್ಲಿ ಹೇಳುವ ಅಕ್ಷರ ಚಿಹ್ನೆ ಇದು.

   1) U 2) X 3) _ 4) V

10. ಒಂದು ಮಾತ್ರೆಯಲ್ಲಿ ಗುರುತಿಸುವ ಅಕ್ಷರ ಇದು

    1) ಆ 2) ದ 3) ಮೇ 4) ದೈ

11. ಎರಡು ಮಾತ್ರಾಕಾಲದಲ್ಲಿ ಹೇಳುವ ಅಕ್ಷರ ಇದು

1) ರ 2) ಗೊ 3) ದೈ 4) ರೊ

12. 'ಲಘು' ಎಂದು ಕರೆಯುವ ಚಿಹ್ನೆ ಇದು

1) _ 2) X 3) U 4) V

13. 'ಗುರು' ಎಂದು ಕರೆಯುವ ಚಿಹ್ನೆ ಇದು

1) _ 2) X 3) U 4) V

14. ಗುರು ಚಿಹ್ನೆ (_) ಹಾಕಬೇಕಾದ ಪದ ಇದು.

1) ಸರಳ 2) ಗೊರವ 3) ಭೈರವ 4) ನರಳ

15. 'ಲಘು' ಚಿಹ್ನೆ (U) ಹಾಕಬೇಕಾದ ಪದ ಇದು.

1) ದೊರೆವ 2) ದೈತ್ಯ 3) ಪೌರುಷ 4) ತ್ಯಾಗ

16. 'ಐ' ಈ ಅಕ್ಷರ ಹೇಳಲು ತೆಗೆದುಕೊಳ್ಳುವ ಮಾತ್ರಾಕಾಲ ಇದು

1) ಒಂದು 2) ಮೂರು 3) ಎರಡು 4) ನಾಲ್ಕು

17. 'ನಿಲ್' ಈ ಅಕ್ಷರಕ್ಕೆ ಹಾಕಬೇಕಾದ ಚಿಹ್ನೆ

1) U 2) __ 3) UU 4) __ __

18. ಎಲ್ಲಾ ದೀರ್ಘ ಸ್ವರಾಕ್ಷರಗಳಿಗೆ ಹಾಕಬೇಕಾದ ಚಿಹ್ನೆ ಇದು.

1) U 2) __ 3) UU 4) X

19. ಒತ್ತಕ್ಷರದ ಹಿಂದಿನ ಅಕ್ಷರಕ್ಕೆ ಹಾಕಬೇಕಾದ ಚಿಹ್ನೆ ಇದು.

1) __ 2) U
3) S 4) ಯಾವುದು ಅಲ್ಲ

20. ಈ ಕೆಳಗಿನ ಅಕ್ಷರಗಳಲ್ಲಿ ಗುರು (_) ಹಾಕಬೇಕಾದ ಅಕ್ಷರ.

1) ಅ 2) ಅಂ 3) ರ 4) ದೊ

21. 'ಕೋಗಿಲೆ' ಈ ಪದಕ್ಕೆ ಹಾಕಬೇಕಾದ ಮಾತ್ರೆಗಳು ಇವು.

1) UUU 2) – – – 3) __ UU 4) UU__

22. ಈ ಕೆಳಗಿನ ಅಕ್ಷರಗಳಲ್ಲಿ ಲಘು (U) ಚಿಹ್ನೆ ಮಾತ್ರ ಹಾಕಬೇಕಾದ ಪದ ಇದು.

1) ಕೈಗಾ 2) ಭಿಷಾ 3) ಪೊರೆವ 4) ದೀಕ್ಷಾ

23. ಎರಡು ಮಾತ್ರಾಕಾಲದಲ್ಲಿ ಹೇಳುವ ಅಕ್ಷರಗಳೆಲ್ಲಾ __________ ಆಗಿರುತ್ತವೆ.

1) ಗುರು 2) ಲಘು

3) ಲಘು ಗುರು ಎರಡು 4) ಯಾವುದು ಇಲ್ಲ

24. ಒಂದು ಮಾತ್ರಾಕಾಲದಲ್ಲಿ ಹೇಳುವ ಅಕ್ಷರಗಳೆಲ್ಲಾ ______________ ಆಗಿರುತ್ತದೆ.

1) ಗುರು 2) ಲಘು

3) ಲಘು ಗುರು ಎರಡು 4) ಯಾವುದು ಇಲ್ಲ

25. ಒಂದು ಅಕ್ಷರವನ್ನು ಹೇಳಲು ತೆಗೆದುಕೊಳ್ಳುವ ಸಮಯ ಛಂದಸ್ಸಿನಲ್ಲಿ ಹೀಗೆನ್ನುವರು:

1) ಮಾತ್ರೆ 2) ಗುಳಿಗೆ 3) ಸಮಯ 4) ವೇಳೆ

## ಆ. ಹೊಂದಿಸಿ ಬರೆಯಿರಿ.

| 'ಅ' ಪಟ್ಟಿ | 'ಬ' ಪಟ್ಟಿ | ಉತ್ತರ |
|---|---|---|
| 1. ಅಕ್ಷರಗಳು | 1. __UU | __________ |
| 2. ಭಾಷೆ | 2. __ U __ U | __________ |
| 3. ಧೈರ್ಯವಂತ | 3. __U | __________ |
| 4. ಕಂಕಣ | 4. __UUUU | __________ |
| 5. ಗೊರವ | 5. _ UU | __________ |

**ಇ. ಕೆಳಗಿನ ಪದದ ಪ್ರಸ್ತಾರದಂತೆ ಮುಂದಿನ ಪದದ ಪ್ರಸ್ತಾರ ಹಾಕಿ.**

1. ಸಮಸ್ತ U __ U ಕ್ಷೇತ್ರ ________________
2. ಶಾಚರ __ UU ದೈವಗತಿ ________________
3. ಸೀಮಾ __ __ ನಿಮ್ಮದು ________________
4. ತಾಂಡವ __ UU ನರರ ________________
5. ಸಂಸ್ಕೃತಿ _ UU ಶ್ರಮಾ ________________

**ಈ. ಕೆಳಗಿನ ಪ್ರಶ್ನೆಗಳಿಗೆ ಒಂದು ಪದದಲ್ಲಿ ಉತ್ತರಿಸಿ.**

1. ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ಕವಿಗಳು ಬಳಸುವ ಪದ್ಯರಚನಾ ವಿಧಾನಕ್ಕೆ ಏನೆಂದು ಕರೆಯುತ್ತಾರೆ?

ಉ ________________________________________

2. ಒಂದು ಮಾತ್ರಾಕಾಲದಲ್ಲಿ ಹೇಳುವ ಅಕ್ಷರಗಳನ್ನು ಛಂದಸ್ಸಿನಲ್ಲಿ ಏನೆಂದು ಕರೆಯುತ್ತಾರೆ?

ಉ ________________________________________

3. ಅಕ್ಷರ ಅಥವಾ ಮಾತ್ರೆಗಳ ಗುಂಪನ್ನು ಏನೆಂದು ಕರೆಯುವರು?

ಉ ________________________________________

4. ಮೂರು ಸಾಲಿನ ಪದ್ಯಕ್ಕೆ ಏನೆನ್ನುತ್ತಾರೆ?

ಉ ________________________________________

5. ಆರು ಸಾಲಿನ ಪದ್ಯಕ್ಕೆ ಏನೆನ್ನುತ್ತಾರೆ?

ಉ ________________________________________

**ಉ. ಈ ಕೆಳಗಿನ ಪದಗಳಿಗೆ ಲಘು – ಗುರು ಹಾಕಿರಿ.**

| | | | |
|---|---|---|---|
| ಗೌತಮಿ | ಔಷಧಿ | ಅಕ್ಷರ | ದುಃಖ |
| ಮರಗಳ್ | ಗೈರು | ದೊರೆ | ಅಂತಃಪುರ |

**ಊ. ಈ ಕೆಳಗಿನ ಸಾಲುಗಳಿಗೆ ಲಘು–ಗುರು ಹಾಕಿರಿ.**

1. ಅಂಬುಜಾನನೆ ಕೇಳು ತಾಂಡವನೆಂಬ ಮುನಿ

ಪಿತೃಮಾತೃ ಸೇವಾಲಂಬಕನು ತೊಳಲಿದನು

ನಾನಾ ತೀರ್ಥ ಯಾತ್ರೆಯಲಿ

**ಋ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಲಘು–ಗುರು ಮಾತ್ರೆಗಳನ್ನು ಆಧರಿಸಿ ಗುಂಪು ಮಾಡುವ ಛಂದಸ್ಸನ್ನು ಹೀಗೆನ್ನುವರು.

___________________________

2. ಮೂರು, ಮೂರು ಅಕ್ಷರಗಳನ್ನು ಗುಂಪು ಮಾಡುವ ಛಂದಸ್ಸನ್ನು ಹೀಗೆನ್ನುವರು.

___________________________

3. 'ಕಂದಪದ್ಯ', 'ಷಟ್ಪದಿ' ಮತ್ತು 'ರಗಳೆ' ಜಾತಿಯ ಛಂದಸ್ಸನ್ನು ಹೀಗೆನ್ನುವರು.

___________________________

4. ಖ್ಯಾತ ಕರ್ನಾಟಕ ವೃತ್ತಗಳು ಯಾವ ಬಗೆಯ ಛಂದಸ್ಸು ಆಗಿದೆ?

___________________________

5. ಕಂದಪದ್ಯದ ಮಾತ್ರೆಗಳನ್ನು ಎಷ್ಟರಂತೆ ಗುಂಪು ಮಾಡುವಿರಿ?

______________________________

6. ಮಾತ್ರೆಗಳ ಗುಂಪಿಗೆ ಏನೆಂದು ಕರೆಯುತ್ತಾರೆ?

______________________________

7. ಅಕ್ಷರಗಳಿಗೆ ಗುಂಪಿಗೆ ಏನೆಂದು ಕರೆಯುತ್ತಾರೆ?

______________________________

8. ನಾಲ್ಕು ಮಾತ್ರೆಗಳ ಗಣ ಇರುವ ಮಾತ್ರಾ ಛಂದಸ್ಸಿನ ಹೆಸರೇನು?

______________________________

9. ಐದು ಮಾತ್ರೆಗಳ ಗಣ ಇರುವ ಮಾತ್ರಾ ಛಂದಸ್ಸಿನ ಹೆಸರೇನು?

______________________________

10. ಕಂದ ಪದ್ಯದಲ್ಲಿ ಎಷ್ಟು ಮಾತ್ರೆಗಳಿಗೆ ಒಂದು ಗುಂಪು (ಗಣ) ಮಾಡುತ್ತೇವೆ?

______________________________

11. ಷಟ್ಪದಿ ಪದ್ಯದಲ್ಲಿ ಎಷ್ಟು ಸಾಲುಗಳಿರುತ್ತವೆ?

______________________________

12. ಕಂದಪದ್ಯದ ಮೊದಲ ಸಾಲಿನಲ್ಲಿ 4 ಮಾತ್ರೆಯ ಎಷ್ಟು ಗಣಗಳಿವೆ?

______________________________

13. 'ಯತಿ' ಎಂದರೇನು?

______________________________

14. ಕಂದಪದ್ಯದಲ್ಲಿ ಯಾವ ಯಾವ ಸಾಲುಗಳು ಪರಸ್ಪರ ಸಮವಾಗಿವೆ?

______________________________

15. 'ಗಣಗಳು' ಎಂದರೇನು?

______________________________

16. ಕಂದಪದ್ಯದ ಎರಡನೆಯ ಸಾಲಿನ ಒಟ್ಟು ಮಾತ್ರೆಗಳ ಸಂಖ್ಯೆ ಎಷ್ಟು?

______________________________

17. ಕಂದಪದ್ಯದ ಮೊದಲ ಸಾಲಿನ ಒಟ್ಟು ಮಾತ್ರೆಗಳ ಸಂಖ್ಯೆ ಎಷ್ಟು?

______________________________

18. ಕಂದಪದ್ಯದಲ್ಲಿ ಒಟ್ಟು ಎಷ್ಟು ಸಾಲುಗಳಿವೆ?

______________________________

19. ಕಂದಪದ್ಯದಲ್ಲಿರುವ ಒಟ್ಟು 'ಗಣ'ಗಳ ಸಂಖ್ಯೆ ಎಷ್ಟು?

______________________________

20. ಈ ಕೆಳಗಿನ ಛಂದಸ್ಸು ಮಾದರಿ ಗಮನಿಸಿ ಛಂದಸ್ಸಿನ ಹೆಸರು ತಿಳಿಸಿ.

______________________________

4 + 4 + 4 = 12

4 + 4 + 4 + 4 + 4 + = 20

4 + 4 + 4 = 12

4 + 4 + 4 + 4 + 4 = 20 (64)

ಛಂದಸ್ಸು = ____________

21. ಈ ಕೆಳಗಿನ ಪದ್ಯಭಾಗಕ್ಕೆ ಲಘು – ಗುರು ಹಾಕಿ (ಪ್ರಸ್ತಾರ ಹಾಕಿ) ಛಂದಸ್ಸಿನ ಹೆಸರು ಬರೆಯಿರಿ.

ಅ) ಒಡೆಯಲು ಜಾಂಡಂ ಕುಲಗಿರಿ

ಕೆಡೆಯಲ್ ನಡುಗಲ್ಕೆ ಧಾತ್ರಿ ದಿವಿಜರ್ ಸೆಡೆಯಲ್ಕೊ।

______________________________

# 4. ಅಲಂಕಾರ

**ಅ) ಕೆಳಗಿನ ಎರಡೂ ವಸ್ತುಗಳನ್ನು ಹೋಲಿಸಿ ಒಂದು ವಾಕ್ಯ ರಚಿಸಿ.**

**ಮಾದರಿ:**

| | |
|---|---|
| ಮನಸ್ಸು > ಸಾಗರ : | ಅವರ ಮನಸ್ಸು ಸಾಗರದಂತೆ ವಿಶಾಲವಾಗಿದೆ. |
| | ಕವಿಯ ಮನಸ್ಸೆಂಬ ಸಾಗರದಿಂದ ಭಾವನೆಗಳು ಮೇಳೈಸಿದವು. |
| ಹಗ್ಗ > ಹಾವು : | |
| | |
| ಚಂದಿರ>ಚೆಂಡು : | |
| | |
| ಮೊಗ > ಹೂವು : | |
| | |
| ಸಾಗರ > ಆಕಾಶ : | |
| | |
| ಕಷ್ಟ > ಬೆಟ್ಟ : | |
| | |
| ಮಾತು > ಕತ್ತಿ : | |
| | |
| ನುಡಿ > ಮುತ್ತು : | |
| | |
| ಶಾಲೆಯ ಮಕ್ಕಳು > ತೋಟದ ಹೂಗಳು : | |
| | |
| ತುಟಿ > ಹವಳ : | |
| | |

| | |
|---|---|
| ಕಣ್ಣು > ಕಮಲ : | |
| ದಂತ > ದಾಳಿಂಬೆ : | |
| ದ್ವೇಷ > ಬೆಂಕಿಯಜ್ವಾಲೆ : | |
| ಕಸ್ತೂರಿ > ಕಪ್ಪು : | |
| ನಿರ್ಮಲವಸ್ತ್ರ > ಮನಸ್ಸು : | |

**ಆ. ಈ ಕೆಳಗಿನ ವಾಕ್ಯದಲ್ಲಿ ಖಾಲಿ ಬಿಟ್ಟಿರುವ ಜಾಗದಲ್ಲಿ ಸೂಕ್ತಪದ ಬರೆದು ಅಲಂಕಾರ ವಾಕ್ಯವನ್ನು ಪೂರ್ಣಗೊಳಿಸಿ.**

ಮಾದರಿ: ಅವಳು ಬಳ್ಳಿಯಂತೆ ಬಳುಕುತ್ತಾಳೆ.

1. ಮಗುವಿನ ಮುಖವು ಚಂದಿರನಂತೆ ______________ ವಾಗಿದೆ.

2. ಬೇಸಿಗೆಯ ಬಿಸಿಲು, ಬೆಂಕಿಯಂತೆ ____________ ದೆ.

3. ಕಾವೇರಿ ನದಿಯು ಹಾವಿನಂತೆ ____________ ಕಾಗಿ ಹರಿಯುತ್ತಿದೆ.

4. ಅವನು ತೆಂಗಿನ ಮರದಂತೆ ____________ ವಾಗಿದ್ದಾನೆ.

5. ಮೀನಿನ ಮೈ ಸಾಬೂನಿನಂತೆ ___________ ಆಗಿದೆ.

6. ಸತ್ಯವಾದ ಮಾತುಗಳು ಕೆಲವರಿಗೆ ಬೇವಿನಂತೆ ___________ ಯಾಗಿ ಕಾಣುತ್ತದೆ.

7. ದುರ್ಯೋಧನನು ಭೀಮನಂತೆ ___________ ಆಗಿದ್ದನು.

8. ಮಗುವಿನ ತ್ವಚೆಯು ಹೂವಿನ ದಳದಂತೆ ____________ ವಾಗಿದೆ.

9. ವ್ಯಾಕರಣ ಶಾಸ್ತ್ರವು ಕೆಲವರ ಪಾಲಿಗೆ ಕಬ್ಬಿಣದಷ್ಟು ____________ ಆಗಿದೆ.

10. ಆತನ ವ್ಯಕ್ತಿತ್ವ ಹಿಮಾಲಯದಷ್ಟು ____________ ವಾಗಿದೆ.

**ಇ. ಈ ಕೆಳಗಿನ ವಾಕ್ಯಗಳಲ್ಲಿ ಉಪಮಾನ – ಉಪಮೇಯಗಳನ್ನು ಆಯ್ದು ಬರೆಯಿರಿ.**

| |
|---|
| 1. ಕಾಲೇ ಕಂಬ, 2. ಬಾನಂಗಳ, 3. ಧರ್ಮಾಶ್ರಮ 4. ಆಕಳ ಕೆಚ್ಚಲು ಅಮೃತ ಕುಂಭ |
| 5. ಕಲಾದೇಗುಲ, 6. ಫಲಿತಕದಳಿ, 7. ಬೆಳ್ಗೊಡೆ, 8. ಹೃದಯಕಮಲ |

| | ಉಪಮಾನ | ಉಪಮೇಯ |
|---|---|---|
| 1. | ____________ | ____________ |
| 2. | ____________ | ____________ |
| 3. | ____________ | ____________ |
| 4. | ____________ | ____________ |
| 5. | ____________ | ____________ |
| 6. | ____________ | ____________ |
| 7. | ____________ | ____________ |
| 8. | ____________ | ____________ |

**ಈ) ಕೆಳಗಿನ ವಾಕ್ಯಗಳಲ್ಲಿರುವ ಅಲಂಕಾರ ಗುರುತಿಸಿ ಬರೆಯಿರಿ.**

ಉಪಮಾನ, ಉಪಮೇಯ, ಸಾಮಾನ್ಯ ಸಾದೃಶ್ಯ ಗುರುತಿಸಿರಿ,

1. ಮಗ್ಗದ ಹಗ್ಗ ಅದು ಹಾವು

   1. ಅಲಂಕಾರ – ____________
   2. ಉಪಮಾನ – ____________
   3. ಉಪಮೇಯ – ____________

2. ಕಲಾರತ್ನ

1. ಅಲಂಕಾರ – ______________________
2. ಉಪಮಾನ – ______________________
3. ಉಪಮೇಯ – ______________________

3. ಉರಿಯುವ ಗಾಯಕ್ಕೆ ಉಪ್ಪು ಸುರಿದಂತೆ

1. ಅಲಂಕಾರ – ______________________
2. ಉಪಮಾನ – ______________________
3. ಉಪಮೇಯ – ______________________

4. ಹೂವಾದ ಹುಡುಗಿ

1. ಅಲಂಕಾರ – ______________________
2. ಉಪಮಾನ – ______________________
3. ಉಪಮೇಯ – ______________________

5. ದಿವ್ಯೌಷಧ

1. ಅಲಂಕಾರ – ______________________
2. ಉಪಮಾನ – ______________________
3. ಉಪಮೇಯ – ______________________

6. ಫಲಿತ ಕದಳಿ ಧರೆಗುರುಳಿದಂತೆ

1. ಅಲಂಕಾರ – ______________________
2. ಉಪಮಾನ – ______________________
3. ಉಪಮೇಯ – ______________________

**(ಉ) ಇದೇ ರೀತಿ ಮತ್ತೊಂದು ಪ್ರಾಸದ ಪದ್ಯ ಬರೆಯಿರಿ.**

**ಆದಿಪ್ರಾಸ ಮತ್ತು ಅಂತ್ಯಪ್ರಾಸಗಳನ್ನು ಬಳಸಿ ಬರೆಯಿರಿ.**

ಬರಲಿ ಧರೆಗೆ ಮಳೆ
ಹಸಿರಾಗಲಿ ಸದಾ ಇಳೆ ।
ಕಾಡಲಿ ಹಸಿರು ಹೊಮ್ಮಿರಲಿ
ನಾಡಲಿ ಹಸನು ಬದುಕಿರಲಿ ॥

ಮಳೆ ಬಂದಾಗ–ಇಳೆ ನೆನೆದಾಗ
ರೈತನ ಶ್ರಮಕ್ಕೆ – ಬೆಲೆಯಾದಾಗ ।
ಬಿತ್ತಿದ ಬೀಜವು ಮೊಳೆತಾಗ
ಮೊಳೆತ ಬೀಜವು ಬೆಳೆಯಾದಾಗ ॥

ಬೆಳೆಯ ಫಲವು ದೊರೆತಾಗ
ಹಸಿವು ಇರದು ಜಗದಾಗ ॥

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ನನ್ನ ಕಲ್ಪನೆಯಂತೆ ಸ್ವರಚಿತ ಪದ್ಯ / ಕವನ ಬರೆಯುವೆ. | | | |
| 2. | ಛಂದಸ್ಸಿನ ಮೂಲ ಅಂಶಗಳನ್ನು ಗುರುತಿಸುವೆ. | | | |
| 3. | ಅಲಂಕಾರಗಳನ್ನು ಗುರುತಿಸಿ ಬರೆಯುವೆ. | | | |
| 4. | ವಾಕ್ಯಗಳನ್ನು ಸ್ಪಷ್ಟವಾಗಿ ಉಚ್ಚರಿಸುವೆ. | | | |
| 5. | ಸಂಧಿ ಹಾಗೂ ಸಮಾಸ ಪದಗಳನ್ನು ಬಿಡಿಸಿ ಬರೆಯುವೆ. | | | |

**ಶಿಕ್ಷಕರ ಅಭಿಪ್ರಾಯ:**

| | | | | | |
|---|---|---|---|---|---|
| **ಅತ್ಯುತ್ತಮ** | | **ಉತ್ತಮ** | | **ಸಾಧಾರಣ** | |

# 5. ಕಿರುಪರೀಕ್ಷೆ – 1

**(ಅ) ಪದವನ್ನು ಬಿಡಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.**

1. ಬೆಟ್ಟದಾವರೆ ______ ______
2. ಕೈತೊಳೆ ______ ______
3. ಚಕ್ರಪಾಣಿ ______ ______
4. ಅರಮನೆ ______ ______
5. ಕೆರೆಕಟ್ಟೆ ಬಾವಿಗಳು ______ ______

**(ಆ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

1. ತತ್ಪುರುಷ, ಸವರ್ಣದೀರ್ಘ, ದ್ವಂದ್ವ, ದ್ವಿಗು ______
2. ಹಣೆಗಣ್ಣ, ಮುಕ್ಕಣ್ಣ, ಚಕ್ರಪಾಣಿ, ಮೆಲ್ವಾತು ______
3. ಆ ಕಲ್ಲು, ಆ ಮನೆ, ಅರಮನೆ, ನೇಯ್ದ ವಸ್ತ್ರ ______

**(ಇ) ಈ ಗಾದೆ ಮಾತುಗಳನ್ನು ಪೂರ್ಣಗೊಳಿಸಿ ಬರೆಯಿರಿ.**

1. ದೇಶ ಸುತ್ತು ______
2. ಅತ್ತೆಗೊಂದು ಕಾಲ ______
3. ಊಟ ಬಲ್ಲವನಿಗೆ ರೋಗವಿಲ್ಲ ______
4. ಕೈ ಕೆಸರಾದರೆ ______

**(ಈ) ಈ ಗಾದೆ ಮಾತುಗಳ ಅರ್ಥವನ್ನು ವಿವರಿಸಿ.**

1. ಹಾಸಿಗೆ ಇದ್ದಷ್ಟು ಕಾಲು ಚಾಚು.

______
______
______
______
______
______

2. ಬೆಳ್ಳಗಿರುವುದೆಲ್ಲಾ ಹಾಲಲ್ಲ.

(ಉ) ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

1. ಕಾವ್ಯದ ಸೌಂದರ್ಯ ಹೆಚ್ಚಿಸಲು ಬೇಕಾದ ಶಾಸ್ತ್ರ ________ .
(ಭೌತಶಾಸ್ತ್ರ, ತರ್ಕಶಾಸ್ತ್ರ, ಛಂದಸ್ಸು ಶಾಸ್ತ್ರ, ಜೀವಶಾಸ್ತ್ರ)
2. ಆರು ಸಾಲಿನ ಪದ್ಯ ________ .
(ದ್ವಿಪತಿ, ತ್ರಿಪದಿ, ಷಟ್ಪದಿ, ಚೌಪದಿ)
3. ಒಂದು ಮಾತ್ರಾ ಕಾಲವನ್ನು ಗುರುತಿಸುವ ಚಿಹ್ನೆ ________ .
(×, -, U, V)
4. ಗುರು ಚಿಹ್ನೆ (-) ಹಾಕಬೇಕಾದ ಪದ ________ .
(ಸರಳ, ಗೊರವ, ಭೈರವ, ಪೊರೆವ)
5. ಲಘು ಚಿಹ್ನೆ (U) ಹಾಕಬೇಕಾದ ಪದ ________ .
(ಗೋಪಿಕಾ, ಸರಳ, ನೂಪುರ, ಭೈರವ,)

| ಶಿಕ್ಷಕರ ಅಭಿಪ್ರಾಯ: | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

# 6. ಓದೋಣ ಬನ್ನಿ

**(ಆ) ಈ ಗದ್ಯಭಾಗ ಓದಿ ಗೆಳೆಯರೊಡನೆ ಚರ್ಚಿಸಿ, ಇದರ ಸಾರಾಂಶವನ್ನು ಬರೆಯಿರಿ.**

## 1. ಆತ್ಮ ವಿಶ್ವಾಸ

ಮಾನವ ತನ್ನನ್ನು ಅಶಕ್ತನೆಂದೂ, ಕೆಲಸಕ್ಕೆ ಬಾರದವನೆಂದೂ, ನಿರ್ಭಾಗ್ಯನೆಂದು ಭಾವಿಸಿಕೊಳ್ಳುವುದೇ ಅತಿದೊಡ್ಡ ಪಾಪ. ಈ ಜಗತ್ತಿನಲ್ಲಿ ಯಾರೂ ಅಷ್ಟೇ ಏಕೆ ಯಾವ ವಸ್ತುವೂ ಅಪ್ರಯೋಜಕವಲ್ಲ. ಯಾವ ವ್ಯಕ್ತಿಯೂ ನಿಷ್ಪ್ರಯೋಜಕನಲ್ಲ. ಒಬ್ಬರಲ್ಲಿ ಇಲ್ಲದ್ದು ಇನ್ನೊಬ್ಬರಲ್ಲಿ ಇದೆ. ಇನ್ನೊಬ್ಬರಲ್ಲಿ ಇಲ್ಲದ್ದು ನಮ್ಮಲ್ಲಿ ಇದೆ. ಒಟ್ಟಿನಲ್ಲಿ ಎಲ್ಲರಲ್ಲೂ ಏನಾದರೊಂದು ಗುಣ, ಶಕ್ತಿ, ಸಾಮರ್ಥ್ಯ ಇದ್ದೇ ಇದೆ. ಸೃಷ್ಟಿಕರ್ತ ಒಬ್ಬನಿಗೇ ಎಲ್ಲವನ್ನೂ ಕೊಟ್ಟು ಪಕ್ಷಪಾತ ಮಾಡಲಾರ. ಆದ್ದುದರಿಂದಲೇ ಒಬ್ಬನೇ ವ್ಯಕ್ತಿಯಲ್ಲಿ ಎಲ್ಲವನ್ನು ಕಾಣಲಾಗದು.

ಪ್ರತಿಯೊಬ್ಬರಿಗೂ ಅವರದೇ ಆದ ಶಕ್ತಿ ಸಾಮರ್ಥ್ಯಗಳಿವೆ. ಆದ್ದುದರಿಂದ, ಯಾರಿಗೂ ಯಾವ ರೀತಿಯ ಕೀಳರಿಮೆಯೂ ಬೇಡ, ಬಹಳ ಸಲ ನಮ್ಮಲ್ಲಿ ಸುಪ್ತವಾಗಿರುವ, ಗುಪ್ತವಾಗಿರುವ ಅಪಾರ ಶಕ್ತಿಯ ಬಗ್ಗೆ ನಮಗೇ ಅರಿವಿರುವುದಿಲ್ಲ. ಅದನ್ನು ಗುರುತಿಸಿ, ಪೋಷಿಸಿ, ಪ್ರೋತ್ಸಾಹಿಸಿ ನಮಗೆ ನಾವೇ ಅಪಾರ ಆತ್ಮವಿಶ್ವಾಸವನ್ನು ತುಂಬಿಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ ತಮ್ಮಲ್ಲಿ ಏನಿದೆ, ಏನಿಲ್ಲ, ತಮ್ಮಿಂದ ಏನು ಸಾಧ್ಯ, ಏನು ಅಸಾಧ್ಯ ಎಂಬುದನ್ನು ಗುರುತಿಸಬೇಕಾದುದು ಮೊದಲ ಕೆಲಸ. ಈ ಪ್ರಕ್ರಿಯೆಯಲ್ಲಿ ನಾವು ನಮ್ಮನ್ನು ಇತರರೊಂದಿಗೆ ತುಲನೆ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ನಮ್ಮ ಜೀವನ ರಥಕ್ಕೆ ನಾವೇ ಸಾರಥಿಗಳು.

ಆದುದರಿಂದ ನಮ್ಮೊಳಗೆ ಸುಪ್ತವಾಗಿರುವ ಪ್ರತಿಭೆಯನ್ನು ನಾವೇ ಗುರುತಿಸಿಕೊಂಡು, ಆ ಪ್ರತಿಭೆಯನ್ನು ಕಾರ್ಯರೂಪದಲ್ಲಿ ವ್ಯಕ್ತಪಡಿಸಲು ಸರ್ವ ಪ್ರಯತ್ನವನ್ನು ಮಾಡಬೇಕು. ನೀವು ಇಷ್ಟಪಟ್ಟಿದನ್ನು ಪಡೆಯಲು ಅವಿರತವಾಗಿ ಶ್ರಮಿಸಿ. ಇಲ್ಲವಾದರೆ ನೀವು ಪಡೆದದ್ದನ್ನಷ್ಟೆ ಅನಿವಾರ್ಯವಾಗಿ ಇಷ್ಟಪಡಬೇಕಾಗುತ್ತದೆ.

ನಮ್ಮ ಆತ್ಮಶಕ್ತಿಯನ್ನು ನಾವೇ ಜಾಗೃತಗೊಳಿಸಬೇಕಾಗುತ್ತದೆ. ಈ ಕೆಲಸ ನಿನ್ನಿಂದ ಆಗೋದಿಲ್ಲ ಅಂತ ಹೇಳಿದ ಮೇಲೂ ಬಿಡದೆ ಆ ಕೆಲಸವನ್ನು ಮಾಡಿ ಮುಗಿಸಿದಾಗ ಸಿಗುವ ಆನಂದಕ್ಕೆ ಪಾರವೇ ಇಲ್ಲ. ಅಂದರೆ ನಮ್ಮಲ್ಲಿ ಯಾರೂ ವ್ಯರ್ಥರಲ್ಲ. ನಿಷ್ಪ್ರಯೋಜಕರಲ್ಲ. ಎಲ್ಲರ ಒಳಗೆ ಏನೋ ಒಂದು ಶಕ್ತಿ ಇದೆ. ಆ ಶಕ್ತಿಯ ಪ್ರಚೋದನೆಯಾಗಬೇಕು ಅಷ್ಟೇ.

ನಮ್ಮೊಳಗಿನ ಆತ್ಮವಿಶ್ವಾಸವೇ ನಮಗೆ ದಾರಿದೀಪ. ಆತ್ಮವಿಶ್ವಾಸದ ಬಲದಿಂದಲೇ ನಮ್ಮೊಳಗಿನ ಶಕ್ತಿಯನ್ನು ಪ್ರಚೋದಿಸಿಕೊಳ್ಳಬೇಕು. ನಮಗೆ ಆಸಕ್ತಿ ಅಭಿರುಚಿಗಳಿಗಿರುವ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಾ ಹಂತ ಹಂತವಾಗಿ ಮೇಲೇರಬೇಕು. ಈ ಪ್ರಕ್ರಿಯೆಯಲ್ಲಿ ಮನಸ್ಸನ್ನು ದುರ್ಬಲಗೊಳಿಸುವ ನಕಾರಾತ್ಮಕ ಭಾವನೆಗಳನ್ನು ನಮ್ಮ ಬಳಿಗೆ ಬಾರಲು ಬಿಡಬಾರದು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆ ಒಂದೇ ದಿನದಲ್ಲಿ ಸಾಧ್ಯವಾಗುವ ಕೆಲಸವಲ್ಲ. ನಿರಂತರವಾದ ಪ್ರಾಮಾಣಿಕ ಪ್ರಯತ್ನಬೇಕು. ಪರಿಶ್ರಮ ಬೇಕು, ಜೊತೆಗೆ ತಾಳ್ಮೆಯೂ ಬೇಕು. ಆಗ ಮಾತ್ರ ಅಸಾಧ್ಯವಾದುದು ಸಾಧ್ಯವಾಗುತ್ತದೆ.

ಆತ್ಮವಿಶ್ವಾಸವೆಂದರೆ, ನನ್ನಿಂದ ಇದು ಸಾಧ್ಯ, ನಾನು ಮಾಡಬಲ್ಲೆನು ಎಂಬ ಅಚಲವಾದ ಅಪಾರವಾದ ನಂಬಿಕೆ. ಈ ನಂಬಿಕೆ ಅಥವಾ ಆತ್ಮವಿಶ್ವಾಸದ ಕೊರತೆಯೇ ದೌರ್ಬಲ್ಯತೆಗೂ, ಭಯಪೀಡಿತ

ಸ್ಥಿತಿಗೂ, ಅಸಹಾಯಕತೆಗೂ ಕಾರಣವಾಗುತ್ತದೆ. ದಾರಿಯಲ್ಲಿರುವ ಕಲ್ಲುಮುಳ್ಳುಗಳ ಬಗ್ಗೆ, ಹಳ್ಳಕೊಳ್ಳಗಳ ಬಗ್ಗೆ ಯೋಚಿಸುತ್ತಾ ಕುಳಿತರೆ, ನಾವೆಂದೂ ಹೋಗಬೇಕಾದ ಗುರಿಯನ್ನು ತಲುಪಲಾರೆವು.

ಆತ್ಮವಿಶ್ವಾಸವನ್ನು ಕಳೆದುಕೊಂಡವನು ಎಲ್ಲವನ್ನೂ ಕಳೆದುಕೊಂಡಂತೆ. ಆಶಾವಾದವೇ ಆತ್ಮವಿಶ್ವಾಸಕ್ಕೆ ಆಹಾರ, ಆಶಾವಾದಿಯು – ಇಷ್ಟೊಂದು ಮುಳ್ಳುಗಳ ನಡುವೆಯೂ ಇಂತಹ ಸೊಗಸಾದ ಗುಲಾಬಿ ಹೂವಿದೆಯಲ್ಲ ಅಂತಾನೆ, ನಿರಾಶಾವಾದಿಯು – ಇಷ್ಟೊಂದು ಸೊಗಸಾದ ಹೂವಿನ ನಡುವೆ ಎಷ್ಟೊಂದು ಮುಳ್ಳುಗಳಿವೆಯಲ್ಲಾ ಎಂದು ಕೊರಗುತ್ತಾನೆ. ಆಶಾವಾದಿ ಮರೆಯಲು ನಗುತ್ತಾನೆ. ನಿರಾಶಾವಾದಿ ನಗಲು ಮರೆಯುತ್ತಾನೆ.

ಯಾವುದೇ ಕೆಲಸ ನಮ್ಮಿಂದ ಆಗಲಾರದು ಎಂದು ಬೇರೆಯವರು ಹೇಳಿದರೆ ಅದು ಅವರ ಅಭಿಪ್ರಾಯ. ಅದನ್ನು ಸುಳ್ಳು ಮಾಡಿ ತೋರಿಸುವುದಷ್ಟೇ ನಮ್ಮ ಕೆಲಸ. ಇಲ್ಲದಿದ್ದರೆ ನಾವು ಅವರ ಅನಿಸಿಕೆಯನ್ನು ನಿಜಮಾಡಿದಂತಾಗುತ್ತದೆ. ಹಾಗಾಗಬಾರದು, ನಮ್ಮಲ್ಲಿರುವ ಶಕ್ತಿ–ಯುಕ್ತಿಗಳನ್ನು ಒಟ್ಟಾಗಿಸಿ ಛಲದಿಂದ ಮುನ್ನಡೆದರೆ ಜಯ ಖಂಡಿತ.

| **ಸಾರಾಂಶ:** |
| --- |
| |
| |
| |
| |
| |
| |
| |
| |
| |
| |
| |
| |
| |

# 2. ಮೊದಲು ಮಾನವನಾಗು

**ಇಂದೊಂದು ತುಂಬ ಮಾರ್ಮಿಕವಾದ ಝೆನ್ ಕಥೆ**

ಒಂದು ಬೌದ್ಧ ದೇವಾಲಯದ ಹಿಂಭಾಗದಲ್ಲಿ ದೊಡ್ಡ ತೋಟವಿತ್ತು. ಅಲ್ಲಿ ಅನೇಕ ಹಣ್ಣಿನ ಗಿಡಗಳು, ಬಳ್ಳಿಗಳು ಸೊಂಪಾಗಿ ಬೆಳೆದಿದ್ದವು. ಇವಲ್ಲದೇ ಒಂದಿಷ್ಟು ಹೂವು, ತರಕಾರಿ ಬೆಳೆಯುವ ಪ್ರದೇಶ, ಔಷಧಿ ಗುಣವುಳ್ಳ ಸಸ್ಯಗಳ ಜಾಗ–ಇವುಗಳಿಂದ ತೋಟ ಮತ್ತಷ್ಟು ದೊಡ್ಡದಾಗಿ ಕಾಣುತ್ತಿತ್ತು. ದೇವಾಲಯಕ್ಕೆ ಬೇಕಾದ ಹೂವು, ಹಣ್ಣುಗಳು ಬರುವುದು ಈ ತೋಟದಿಂದಲೇ. ದೇವಾಲಯಕ್ಕೆ ಬಂದ ಭಕ್ತರು ಕೂಡ ಈ ತೋಟದಲ್ಲಿ ಸುತ್ತಾಡಿ, ಮರಗಳ ಕೆಳಗೆ ಕುಳಿತು ಧ್ಯಾನ ಮಾಡಿ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳುತ್ತಿದ್ದರು.

ದೇವಸ್ಥಾನದ ಹಿಂದಿನ ಗೋಡೆಗೆ ಒಂದು ಸೋರೆಕಾಯಿ ಬಳ್ಳಿ ಹಬ್ಬಿತ್ತು. ಅದು ಎರಡಾಗಿ ಎಡಕ್ಕೂ, ಬಲಕ್ಕೂ ಹರಡಿ ಗೋಡೆಯನ್ನೆಲ್ಲ ಆವರಿಸಿಕೊಂಡಿತ್ತು. ಅಲ್ಲಲ್ಲಿ ನೇತಾಡುತ್ತಿದ್ದ ದೊಡ್ಡ ದೊಡ್ಡ ಸೋರೇಕಾಯಿಗಳು ಅಲಂಕಾರದಂತೆ ಕಾಣುತ್ತಿದ್ದವು.

ಒಂದು ದಿನ ಎಡಭಾಗದ ಸೋರೆಕಾಯಿಗಳಿಗೂ, ಬಲಭಾಗದ ಸೋರೆಕಾಯಿಗಳಿಗೂ ಯಾವುದೋ ಕಾರಣಕ್ಕೆ ಜಗಳ ಹುಟ್ಟಿಕೊಂಡಿತ್ತು. ಮೊದಲು ಪಿಸ–ಪಿಸ, ಗುಸ–ಗುಸ ಎಂದು ಪ್ರಾರಂಭವಾದ ಅಸಮಾಧಾನ ಕೊನೆಗೆ ಭಾರೀ ಜಗಳಕ್ಕೆ ತಿರುಗಿತು.

ಆದರೆ ಆಗ ದೇವಸ್ಥಾನದಲ್ಲಿ ಸಂಜೆಯ ಧ್ಯಾನದ ಸಮಯ. ಈ ಸೋರೆಕಾಯಿಗಳ ಗಲಾಟೆ ಝೆನ್ ಗುರುವಿನ ಧ್ಯಾನವನ್ನು ಕೆಡಿಸಿತು. ಆತ ಎದ್ದು ದೇವಸ್ಥಾನದ ಹಿಂದೆ ಬಂದು ನೋಡುತ್ತಾನೆ. ಈ ಕಾಯಿಗಳು ಜೋರಾಗಿ ಜಗಳವಾಡುತ್ತಿವೆ. ಅವನು ದೊಡ್ಡ ಧ್ವನಿಯಲ್ಲಿ ಕೂಗಿದ "ಸೋರೆಕಾಯಿಗಳೇ, ನಿಲ್ಲಿಸಿ ನಿಮ್ಮ ಗಲಾಟೆ. ಇದು ಧ್ಯಾನದ ಸಮಯ, ನಿಮಗೆ ಗೊತ್ತಿಲ್ಲವೇ?" ಸೋರೆಕಾಯಿಗಳು ಗಾಬರಿಯಿಂದ ಬಾಯಿ ಮುಚ್ಚಿಕೊಂಡವು. ಗುರು ಮತ್ತೆ ಗಟ್ಟಿಯಾದ ಧ್ವನಿಯಲ್ಲಿ ಹೇಳಿದ, "ನೀವೂ ಧ್ಯಾನ ಮಾಡಿ ನೋಡೋಣ. ನಿಮಗೆ ಕಲಿಸಿದ್ದೇನಲ್ಲ. ನೀವೆಲ್ಲ ನನ್ನ ಹಾಗೆ ಕಾಲು ಮಡಿಚಿಕೊಂಡು ಕುಳಿತುಕೊಳ್ಳಿ. ನಿಮ್ಮ ಬೆನ್ನು, ಕತ್ತು, ತಲೆ ನೇರವಾಗಿರಿ". ಎಲ್ಲ ಸೋರೆಕಾಯಿಗಳು ಗುರು ಹೇಳಿದಂತೆ ಕುಳಿತವು. " ಈಗ ಕಣ್ಣು ಮುಚ್ಚಿ, ದೀರ್ಘವಾಗಿ ಉಸಿರು ತೆಗೆದುಕೊಳ್ಳಿ. ಈಗ ನಿಧಾನವಾಗಿ ನಿಮ್ಮ ಕೈಗಳನ್ನು ನಿಮ್ಮ ತಲೆಯ ಮೇಲೆ ತೆಗೆದುಕೊಂಡು ಹೋಗಿ" ಎಂದರು. ಗುರುಗಳು ಹೇಳಿದಂತೆಯೇ ಮಾಡಿದವು ಸೋರೆಕಾಯಿಗಳು. ಒಂದು ಕಾಯಿ ತನ್ನ ತಲೆಯ ಮೇಲೆ ಕೈ ಇಟ್ಟುಕೊಂಡಾಗ ಕೈಗೆ ಏನೋ ಒಂದು ಕಡ್ಡಿ ತಡೆದಂತಾಯಿತು. ಅದನ್ನೇ ಅನುಸರಿಸಿ ಕೈ ಚಾಚಿದಾಗ ಅದು ಮತ್ತೊಂದು ಸೋರೆಕಾಯಿಯ ತಲೆ ತಲುಪಿತ್ತು. ಆಗ ಆ ಇನ್ನೊಂದು ಸೋರೆಕಾಯಿ ತನ್ನ ತಲೆಯಿಂದ ಹೊರಟ ಕಡ್ಡಿಯನ್ನು ಅನುಸರಿಸಿದಾಗ ಅದು ಮತ್ತೊಂದರ ತಲೆ ಮುಟ್ಟಿತು. ಆಗ ಅವುಗಳೆಲ್ಲ ಖುಷಿಯಿಂದ ತಮ್ಮ ತಮ್ಮ ತಲೆ ಮುಟ್ಟಿಕೊಂಡಾಗ ಒಂದು ಆಶ್ಚರ್ಯ ಕಾದಿತ್ತು. ಅವುಗಳಿಗೆ ಅರಿವಾಯಿತು. ತಾವೆಲ್ಲ ಒಂದೇ ಗಿಡದ ಕಾಯಿಗಳು ಎಂದು. ಅವುಗಳ ನಗು ನೋಡಿ ಗುರು ಹೇಳಿದರು– "ನೀವು ಯಾರೊಂದಿಗೆ ಜಗಳ ಕಾಯುತ್ತಿದ್ದೀರಿ? ನೀವೆಲ್ಲ ಒಂದೇ". ಇದನ್ನು

ತಿಳಿದುಕೊಂಡು ಮುಂದೆ ಸೋರೆಕಾಯಿಗಳು ಜಗಳವಾಡಲಿಲ್ಲವಂತೆ.

ಸೋರೆಕಾಯಿಗಳಿಗೆ ತಿಳಿದದ್ದು ನಮಗೆ ತಿಳಿಯುತ್ತಿಲ್ಲ. ನಾವು ನಾವೇ ನಿರ್ಮಿಸಿಕೊಂಡ ಜಾತಿ, ಒಳಜಾತಿ, ಪಂಥಗಳು, ನಿಜವಾದ ಧರ್ಮದ ತಿಳುವಳಿಕೆಯಿಲ್ಲ, ಲಿಂಗ ಭೇದಗಳು, ರಾಷ್ಟ್ರಭೇದಗಳು ಇವೆಲ್ಲವುಗಳ ನಡುವೆ ನಾವು ಮೂಲತಃ ಮಾನವರು ಎಂಬುದನ್ನೇ ಮರೆತಿದ್ದೇವೆ. ಅದಕ್ಕೆ ಕವಿವಾಣಿ ನಮ್ಮನ್ನು ಸದಾ ಎಚ್ಚರಿಸುತ್ತದೆ. "ಏನಾದರೂ ಆಗು, ಮೊದಲು ಮಾನವನಾಗು".

| **ಸಾರಾಂಶ:** |
| --- |
| |
| |
| |
| |
| |
| |
| |
| |
| |
| |
| |
| |
| |
| |
| |
| |
| |

## 3. ಒಬ್ಬ ಸಾಮಾನ್ಯ – ಮತ್ತೊಬ್ಬ ಅಸಾಮಾನ್ಯ

ಈ ಗುಡ್ಡದ ಮೇಲಿರುವ ಕಗ್ಗಲ್ಲು. ಕರಿಯ ದೆವ್ವದಂಥ ಬಂಡೆಗಲ್ಲು. ಅದನ್ನು ಒಬ್ಬ ಶಿಲ್ಪಿ ನೋಡುವುದಕ್ಕೂ ಒಬ್ಬ ಸಾಮಾನ್ಯ ಮನುಷ್ಯ ನೋಡುವುದಕ್ಕೂ ವ್ಯತ್ಯಾಸ ಇದೆ. ಸಾಮಾನ್ಯ ಮನುಷ್ಯ ಅದನ್ನು ಒಂದು ಕಲ್ಲಾಗಿ ನೋಡುತ್ತಾನೆ. ಆದರೆ, ಶಿಲ್ಪಿ ಆ ಕಲ್ಲಿನಲ್ಲಿ ಅದ್ಭುತವಾದ ಶಿಲ್ಪವನ್ನು ಕಾಣುತ್ತಾನೆ. ಆ ಬಂಡೆಯನ್ನು ನೋಡುತ್ತಿರುವಾಗಲೇ ಅದರೊಳಗಿನ ಶಿಲ್ಪ ಆತನನ್ನು ಸೆಳೆದು "ಬಾ, ನಿನ್ನ ಕೈ ಚಳಕ ತೋರಿಸು" ಎಂದು ಕರೆಯುತ್ತದೆ.

ಸಾಮಾನ್ಯ ಮನುಷ್ಯ ಆ ಗುಡ್ಡದ ಕರಿಕಲ್ಲಿನ ಮೇಲೆ ತನ್ನ ಹೆಸರನ್ನು ಕೆತ್ತಿ, ಖುಷಿಪಡುತ್ತಾನೆ. ಆದರೆ ಶಿಲ್ಪಿ ಆ ಬಂಡೆಯ ಅನಗತ್ಯ ಭಾಗಗಳನ್ನು ಕೆತ್ತಿ ಬಿಸಾಡಿ, ಕೊನೆಗೆ ಒಂದು ಅತ್ಯಂತ ಶಿಲಾಮೂರ್ತಿಯನ್ನು ಪ್ರದರ್ಶಿಸುತ್ತಾನೆ. ಸಾಮಾನ್ಯ ಮನುಷ್ಯನ ಕಣ್ಣುಗಳಿಗೆ ಕಾಣದ ಆ ಶಿಲ್ಪ ಶಿಲ್ಪಿಯ ಅಂತರಾತ್ಮಕ್ಕೆ ಮಾತ್ರ ಗೋಚರಿಸುತ್ತದೆ.

ಕಲ್ಲು ಒಂದೇ ಆದರೂ ಅದನ್ನು ಇಬ್ಬರು ವ್ಯಕ್ತಿಗಳು ನೋಡುವ ದೃಷ್ಟಿ ಬೇರೆ ಬೇರೆಯಾಗಿದೆ. ಇಲ್ಲಿ ಒಬ್ಬ ಸಾಮಾನ್ಯ ಮತ್ತೊಬ್ಬ ಅಸಾಮಾನ್ಯ. ಹಾಗೆಯೇ ಒಂದು ಮಗುವನ್ನು ತಂದೆ–ತಾಯಿ ನೋಡುವ ದೃಷ್ಟಿಯು ಹೀಗೆಯೇ ಇರುತ್ತದೆ. ಆ ಮಗುವಿನ ಬಗ್ಗೆ ತಾಯಿ ಅಭಿಮಾನಪಡುತ್ತಿದ್ದರೆ, ತಂದೆ ಸಿಡಿಸಿಡಿ ಎನ್ನುತ್ತಿರಬಹುದು. ಅಥವಾ ತದ್ವಿರುದ್ಧವೂ ಆಗಿರಬಹುದು. "ನನ್ನ ಮಾನ–ಮರ್ಯಾದೆಯನ್ನು ಹರಾಜುಹಾಕುತ್ತಿದೆ" ಎಂದು ಶಪಿಸುತ್ತಿರಬಹುದು. ಇಂತಹ ವಿರುದ್ಧ ಮನೋನಿರ್ಧಾರಗಳಿಗೆ ಆ ಮಗುವನ್ನು ನಾವು ನೋಡುವ ದೃಷ್ಟಿಯೇ ಕಾರಣ! ಇದು ನಮ್ಮ ಅಂತರಂಗದ, ಉದ್ವೇಗದ ತಪ್ಪುಗ್ರಹಿಕೆಗಳೇ ಅಂತಿಮವಾಗಿ ಬಿಡುತ್ತವೆ. ಅಷ್ಟು ಸುಲಭದಲ್ಲಿ ಆ ಬಗ್ಗೆ ನಿರ್ಧಾರಗಳನ್ನು ಬದಲಿಸಿಕೊಳ್ಳಲಾಗುವುದಿಲ್ಲ. ಆ ಮಗುವನ್ನು brand ಮಾಡಿ, ನಮ್ಮ ವೈಶಾಲ್ಯ ದೃಷ್ಟಿಕೋನಕ್ಕೆ ಚೌಕಟ್ಟನ್ನು ಹಾಕಿಕೊಳ್ಳುತ್ತೇವೆ.

ಮೇಲೆ ಹೇಳಿದಂತೆ ಪ್ರತಿಯೊಬ್ಬರೂ ಪ್ರತಿಯೊಬ್ಬರನ್ನು ತಪ್ಪಾಗಿ ಅರ್ಥೈಸಿಯೇ ಇರುತ್ತಾರೆ. ಇದು ಸರ್ವದಾ ಸರಿಯಲ್ಲ. ಶಿಲ್ಪಿಯ ರೀತಿ ಮಗುವನ್ನು ಬೆಳೆಸಬೇಕು. ಕಗ್ಗಲ್ಲಾದರೂ ಸುಂದರಮೂರ್ತಿಯನ್ನು ರೂಪಿಸಬಲ್ಲೆನೆಂಬ ಮನೋಧೋರಣೆ (Positive thinking) ಇರಬೇಕು. ಇಂತಹ ಅದ್ಭುತ ಕಾರ್ಯ ನನ್ನಿಂದ ಮಾತ್ರ ಸಾಧ್ಯ ಎಂಬ ಛಲ (Authentic thinking) ಬರಬೇಕು. ಆ ಮಗುವಿನೊಳಗೂ ಅತಿ ಬುದ್ಧಿಶಾಲಿಯಾದ ಸಮರ್ಥಶಾಲಿಯಾದ ಮನುಷ್ಯನೊಬ್ಬನಿದ್ದಾನೆ ಎಂದು ಕಂಡುಕೊಳ್ಳಬೇಕು.

ಮಗು 'ದಡ್ಡ' ಎಂದು ಹೇಳುವುದನ್ನು ನಿಲ್ಲಿಸಿ. ಆ ಮಗುವಿನ ಸಾಮರ್ಥ್ಯವನ್ನು (Potential) ಹೊರಗೆಳೆದು ಸರಿದಾರಿಗೆ ತರಲು ಪ್ರಯತ್ನಿಸಿ.

ಈ ದಿಸೆಯಲ್ಲಿ ಬಹಳ ತಾಳ್ಮೆಯಿಂದ ಮಗುವನ್ನು ಅರ್ಥೈಸಿಕೊಂಡು ಹೊಣೆಗಾರಿಕೆಯಿಂದ ಕೆಲಸ ನಿರ್ವಹಿಸಬೇಕು. ಮಕ್ಕಳನ್ನು ಗದರಿಸಿ, ಬೆದರಿಸಿ ಕೂಡಿಸುವ ಬದಲು, ಮಾತನಾಡಲು ತನ್ನಲ್ಲಿನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಅವಕಾಶ ಕಲ್ಪಿಸಬೇಕು. ಹೀಗೆ ಮನೆಯಲ್ಲಿ ತಂದೆ–ತಾಯಿ, ಶಾಲೆಯಲ್ಲಿ ಶಿಕ್ಷಕರು ತೆರೆದ ಮನಸ್ಸಿನಿಂದ ಮಗುವನ್ನು ನೋಡಲೇ ಬೇಕು. ಆ ಮಗು

ಪ್ರತಿದಿನ ಹೊಸತನ್ನು ಕಲಿತು, ಒಂದೊಂದೇ ಇಟ್ಟಿಗೆಯನ್ನು ಜೋಡಿಸಿ ಪೂರ್ಣವಾಗುವ ಕಟ್ಟಡದಂತೆ ಮಗುವನ್ನು ಬೆಳೆಸಬೇಕು.

ಎಳೆಯತರು ದಿನದಿನವು ಹೊಸತಳಿರ ತಳೆವಂತೆ

ತಿಳಿನೀರು ಚಿಲುಮೆಯಲ್ಲಿ ನಿಲದುಕ್ಕವಂತೆ !!!

ಎಳೆಮಕ್ಕಳೊಲು ತಿಳಿವು ಮೊಳೆತು ಬೆಳೆವುದು ನೋಡು !

ಇಳೆಯೊಳಗದೊಂದು ಸೋಗ – ಮಂಕುತಿಮ್ಮ.

ಎಳೆಯದಾದ ಸಸಿ, ಪ್ರತಿ ದಿನವೂ ಹೊಸ ಚಿಗುರನ್ನು ಹೊಂದುತ್ತವೆ. ತಿಳಿಯಾದ ನೀರು ಚಿಲುಮೆಯಲ್ಲಿ ಒಂದೇ ಕಡೆ ನಿಲ್ಲದೆ, ಉಕ್ಕಿ ಹರಿಯುವಂತೆ ಮಕ್ಕಳಲ್ಲಿ ತಿಳುವಳಿಕೆ ಮೊಳೆತು, ಬೆಳೆಯುವುದನ್ನು ನೋಡಿ ಆನಂದಿಸಬೇಕು. ಮಕ್ಕಳಲ್ಲಿ ಪ್ರತಿದಿನ ಹೊಸತನ್ನು ಕಾಣಿಸಬೇಕು. ಸದಾ ಹರಿಯುವ ನೀರಂತೆ ಉತ್ಸಾಹದಿಂದಿರುವಂತೆ ನೋಡಿಕೊಳ್ಳಬೇಕು. ಜಗತ್ತಿನಲ್ಲಿ ಇದಕ್ಕಿಂತ ಸುಖಕರ ಅನುಭವ ಬೇರೊಂದಿದೆಯೇ ಎನ್ನುತ್ತಾರೆ ಡಿವಿಜಿಯವರು. ನಾವೂ ಕೂಡಾ ಅಂಥ ಸೌಭಾಗ್ಯವಂತ ಶಿಲ್ಪಿಗಳಾಗೋಣವೇ?

| **ಸಾರಾಂಶ:** |
|---|
| |
| |
| |
| |
| |
| |
| |
| |
| |
| |
| |

# 7. ಕಥೆ ಕಟ್ಟೋಣ

**ಅ) ನೀಡಿರುವ ಕಥೆಯನ್ನು ಓದಿ ಮುಂದಿನ ಭಾಗ ಏನಿರಬಹುದು ಎಂದು ಯೋಚಿಸಿ ಹೇಳಿ, ಅನಂತರ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

## ಕಥೆ–1

ಒಂದು ಹಳ್ಳಿಯಲ್ಲಿ ಒಂದು ನಾಗರಹಾವು ಹಲವಾರು ಜನರನ್ನು ಕಚ್ಚಿ ಕೊಂದುಹಾಕುತ್ತಿತ್ತು. ಹಾವಿನ ಬಗ್ಗೆ ಪ್ರಾಣಿಗಳ ಮೇಲೆ ತನ್ನ ಜಾದೂಶಕ್ತಿಯನ್ನು ಹೊಂದಿದ್ದಾರೆಂದು ನಂಬಿರುವ ಒಬ್ಬ ಸಂತನಿಗೆ ಹಳ್ಳಿಯವರು ಇದನ್ನು ತಿಳಿಸಿದರು.

ಆಗ ಸಂತ ನಾಗರಹಾವನ್ನು ಕರೆದು "ಇನ್ನು ಮುಂದೆ ಯಾರನ್ನೂ ಕಚ್ಚಬಾರದು"ಎಂದು ಅದಕ್ಕೆ ಆಜ್ಞಾಪಿಸಿದನು. ಅಂದಿನಿಂದ ಹಾವು ಯಾರನ್ನೂ ಕಚ್ಚುತ್ತಿರಲಿಲ್ಲ.

ಆದರೆ ಹಾವು ನಿರುಪದ್ರವಿಯಾಗಿ ಸುಮ್ಮನಿರುವುದರಿಂದ ಹಳ್ಳಿಗರು ಕೀಟಲೆ ಮಾಡಲಾರಂಭಿಸಿದರು. ಕೆಲವು ಚಿಕ್ಕಮಕ್ಕಳು ಅದರ ಮೇಲೆ ಕಲ್ಲನ್ನು ಎಸೆಯತೊಡಗಿದರು.

ಇದರಿಂದ ತೊಂದರೆಗೊಳಗಾದ ಹಾವು ಸಂತನ ಆಜ್ಞೆಯಿಂದ ಅತೃಪ್ತಿ ಹೊಂದಿತು. ಅದು ಅವನ ಬಳಿಗೆ ಹೋಗಿ ನಡೆಯುತ್ತಿರುವ ವಿಷಯವನ್ನು ತಿಳಿಸಿತು.

ಸಂತ ಅದರ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಹೀಗೆಂದು ಹೇಳಿದನು:

______________________________

______________________________

**ಪ್ರಶ್ನೆಗಳು**

1. ಸಂತ ನಾಗರಹಾವಿಗೆ ಏನು ಹೇಳಿದನು?

______________________________

______________________________

2. ಈ ಕಥೆಯಿಂದ ತಿಳಿದುಬರುವ ಅಂಶವೇನು?

______________________________

______________________________

## ಕಥೆ–2

ಸಿಸ್ಟರ್ ಎಲಿಜಬೆತ್ ಕೆನ್ನಿ ಎಂಬ ಖ್ಯಾತ ಆಸ್ಟ್ರೇಲಿಯನ್ ಐರಿಷ್ ನರ್ಸು. ಎಂತಹ ಸಮಸ್ಯೆಯಿದ್ದರೂ ಯಾವಾಗಲೂ ಉಲ್ಲಾಸದಿಂದ ನಗುತ್ತಾ ಇರುತ್ತಿದ್ದರು. ಒಂದು ದಿನ ಆಕೆಯ ಸ್ನೇಹಿತರೊಬ್ಬರು ಅದು ಅವರ ಹುಟ್ಟಿನಿಂದ ಬಂದ ಗುಣವೇ ಎಂದು ಕೇಳಿದರು. ಆಗ ಆಕೆ "ಇಲ್ಲ" ಎಂದು ಹೇಳಿ ಮುಂದುವರೆಸಿದರು, "ನಾನು ತುಂಬಾ ಚಿಕ್ಕವಳಾಗಿದ್ದಾಗ ನನ್ನ ತಾಯಿ ನನಗೆ ಒಂದು ಸಲಹೆಯನ್ನು ನೀಡಿದರು. ಅದನ್ನು ನಾನು ಗಂಭೀರವಾಗಿ ಅನುಸರಿಸುತ್ತಿದ್ದೇನೆ" ಎಂದರು.

ಅದೇನೆಂದರೆ,

______________________________

______________________________

______________________________

**ಪ್ರಶ್ನೆಗಳು:**

1. ಸಿಸ್ಟರ್ ಎಲಿಜಬೆತ್ ಕೆನ್ನಿಯ ತಾಯಿಯು ನೀಡಿದ್ದ ಸಲಹೆ ಏನಿರಬಹುದು?

______________________________

______________________________

______________________________

2. ಈ ಕಥೆಯ ಆಶಯವೇನು?

______________________________

______________________________

______________________________

**ಆ) ನೀಡಿರುವ ಕಥೆಯನ್ನು ಓದಿಕೊಂಡು ಸರಿಹೊಂದುವ ಶೀರ್ಷಿಕೆಯನ್ನು ಕಥೆಗೆ ನೀಡಿ. ಈ ಕಥೆಯನ್ನು ಸಂಭಾಷಣೆ ರೂಪದಲ್ಲಿ ಬರೆಯಿರಿ.**

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ದಿನಕಳೆದಂತೆ ಆ ರಾಜನು ಸಾಯುವ ಹಂತಕ್ಕೆ ಬಂದಿದ್ದನು. ರಾಜ್ಯದ ಎಲ್ಲಾ ವೈದ್ಯರು ಅವನನ್ನು ಗುಣಪಡಿಸಲು ವಿಫಲರಾದರು. ಕೊನೆಗೆ ಒಬ್ಬ ಸಂತನನ್ನು ಅಲ್ಲಿಗೆ ಕರೆತರಲಾಯಿತು.

ರಾಜನು, "ಮಹಾತ್ಮರೇ, ನಾನು ಇನ್ನೂ ಸಾಯಲು ಸಿದ್ಧನಿಲ್ಲ. ನಿಮ್ಮ ಜ್ಞಾನ ಮತ್ತು ಶ್ರೇಷ್ಠತೆಯನ್ನು ನಾನು ನಂಬುತ್ತೇನೆ. ನಿಮ್ಮ ಶಕ್ತಿಯಿಂದ ದಯವಿಟ್ಟು ನನ್ನನ್ನು ಬಹಳ ಕಾಲ ಬದುಕುವಂತೆ ಮಾಡಿ. ನಿಮಗೆ ಈ ಸಹಾಯ ಮಾಡಲು ಆಗುತ್ತದೆಯೇ?" ಎಂದು ಕೇಳಿದನು.

ಸಂತನು, "ಇದು ಬಹಳ ಸುಲಭ. ನೀನು ರಾಜ್ಯದ ಅತ್ಯಂತ ಸಂತುಷ್ಟನಾದ ವ್ಯಕ್ತಿಯೊಬ್ಬನ ಅಂಗಿಯನ್ನು ಧರಿಸಬೇಕು. ಅಂತಹ ಒಬ್ಬ ವ್ಯಕ್ತಿಯನ್ನು ನೀನು ಹುಡುಕಿದರೆ ನಿಮ್ಮ ಜೀವ ಉಳಿಯುವುದು ಖಚಿತ" ಎಂದು ಹೇಳಿದನು.

ರಾಜನು ತನ್ನ ಭಟರಿಗೆ ಆಜ್ಞಾಪಿಸಿದನು, "ಸಂತರು ಹೇಳಿದಂತೆ ಮಾಡಿ, ಅಲ್ಲಿನ ರಾಜ್ಯದ ಅತ್ಯಂತ ಸಂತುಷ್ಟನಾದ ವ್ಯಕ್ತಿಯೊಬ್ಬನ ಅಂಗಿಯನ್ನು ತನ್ನಿ" ಎಂದು ಅವರಿಗೆ ಹೇಳಿ ಕಳುಹಿಸಿದನು.

ಭಟರು ಹುಡುಕಾಟ ಮಾಡಲು ಹೊರಟರು. ಬಹಳ ಕಷ್ಟದಿಂದ ಅವರಿಗೆ ದೂರದ ಹಳ್ಳಿಯೊಂದರಲ್ಲಿ ಒಬ್ಬ ವ್ಯಕ್ತಿ ಸಿಕ್ಕಿದನು. ಅವನು ರಾಜ್ಯದ ಅತ್ಯಂತ ಸಂತುಷ್ಟ ವ್ಯಕ್ತಿ ಎಂಬುದರಲ್ಲಿ ಸಂಶಯವೇ ಇರಲಿಲ್ಲ. ಆದರೆ ಅವರಿಗೆ ಸಂತರು ಹೇಳಿದ ಮಾತುಗಳನ್ನು ಪೂರೈಸಲಾಗಲಿಲ್ಲ ಕಾರಣವೇನೆಂದರೆ ಆ ವ್ಯಕ್ತಿಯ ಬಳಿ ಒಂದೇ ಒಂದು ಅಂಗಿಯೂ ಇರಲಿಲ್ಲ.

| **ಶೀರ್ಷಿಕೆ :** |
|---|
| (ರಾಜ, ವೈದ್ಯ, ಸಂತ, ಭಟರು, ಸಂತುಷ್ಟ ವ್ಯಕ್ತಿ – ಇವರ ನಡುವೆ ನಡೆದಿರಬಹುದಾದ ಸಂಭಾಷಣೆಯನ್ನು ಬರೆಯಿರಿ) |

| | | |
|---|---|---|
| | : | |
| | : | |
| | : | |
| | : | |
| | : | |
| | : | |

7. ಕಥೆ ಕಟ್ಟೋಣ 4/4

| | | |
|---|---|---|
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |
| | : | |

# 8. ಪತ್ರ ಲೇಖನ

**ಬೇರೆ ಬೇರೆ ರೀತಿಯ ಪತ್ರಗಳನ್ನು ಬರೆಯಿರಿ.**

**ಅ. ಈ ಕೆಳಗಿನ ಬಿಟ್ಟಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ತಾಯಿಯವರಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

2. ತಂದೆಯವರಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಶಬ್ದ

   ____________________

3. ತಮ್ಮನಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

4. ತಂಗಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

5. ಚಿಕ್ಕಮ್ಮನವರಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

6. ದೊಡ್ಡಪ್ಪನವರಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

7. ಗೆಳೆಯಾ / ಗೆಳತಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

8. ಅಕ್ಕನಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

9. ಅಜ್ಜಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ

   ____________________

10. ತಾತನಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನಾ ಪದ _____

    ____________________

**ಆ. ಈ ಕೆಳಗಿನ ವಿಳಾಸವುಳ್ಳ ಅಂಶಗಳನ್ನು ಅನುಕ್ರಮವಾಗಿ ಬರೆಯಿರಿ.**

| | ಅನುಕ್ರಮ |
|---|---|
| 1. ಮೈಸೂರು ನಗರ | ______________ |
| ೬ನೇ ಅಡ್ಡರಸ್ತೆ | ______________ |
| ನಿತಿನ್‌ಕುಮಾರ್ | ______________ |
| ತಂದೆ, ನಾರಾಯಣ | ______________ |
| ೨ನೇ ಮುಖ್ಯರಸ್ತೆ | ______________ |
| ಶ್ರೀನಿಕೇತನ | ______________ |
| ನಂ.೧೪ | ______________ |
| ಬಲ್ಲಾಳ ಸರ್ಕಲ್ | ______________ |

| | |
|---|---|
| 2. ಚಂದ್ರೋದಯ | ______________ |
| ಶ್ರೀ ಕೃಷ್ಣಪ್ರಸಾದ್ | ______________ |
| ನಂ.೬೪ | ______________ |
| ಬೆಂಗಳೂರು ನಗರ | ______________ |
| ೩ನೇ ಅಡ್ಡರಸ್ತೆ | ______________ |
| ೨ನೇ ಹಂತ | ______________ |
| ಜೆ.ಪಿ.ನಗರ | ______________ |

| | |
|---|---|
| 3. ಧಾರವಾಡ | ______________ |
| ಸಾಧನಕೇರಿ | ______________ |
| ಬೇಂದ್ರೆ ರಸ್ತೆ | ______________ |
| ನಂ.೨೨ | ______________ |
| ವಾಮನಬೇಂದ್ರೆ | ______________ |
| ಪಿನ್‌ಕೋಡ್–೫೮೦೦೦೧೧ | ______________ |

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಆರಿಸಿ ಬರೆಯಿರಿ.**

1. ತಂದೆಗೆ ಪತ್ರ ಬರೆಯುವಾಗ ಬಳಸುವ ಗೌರವಸೂಚಕ ಪದ ಇದು.

ಎ) ಮಾತೃಶ್ರೀ　　ಬಿ) ತೀರ್ಥರೂಪ

ಸಿ) ತೀರ್ಥರೂಪ ಸಮಾನರಾದ　　ಡಿ) ಪ್ರೀತಿಯ

ಉ. ______________________________

2. ತಾಯಿಯವರಿಗೆ ಪತ್ರ ಬರೆಯುವಾಗ ಬಳಸುವ ಗೌರವಸೂಚಕ ಪದ ಇದು.

ಎ) ತೀರ್ಥರೂಪ　　ಬಿ) ಮಾತೃಶ್ರೀ

ಸಿ) ಚಿರಂಜೀವಿ　　ಡಿ) ನಲ್ಮೆಯ

ಉ. ______________________________

3. ಭಾವನವರಿಗೆ ಪತ್ರ ಬರೆಯುವಾಗ ಬಳಸುವ ಗೌರವಸೂಚಕ ಪದ ಇದು.

ಎ) ತೀರ್ಥರೂಪ ಸಮಾನರಾದ　　ಬಿ) ತೀರ್ಥರೂಪ

ಸಿ) ಮಾತೃಶ್ರೀ　　ಡಿ) ಒಲುಮೆಯ

ಉ. ______________________________

4. ತಮ್ಮನಿಗೆ ಪತ್ರ ಬರೆಯುವಾಗ ಬಳಸುವ ಸಂಭೋದಿಸುವ ಪದ ಇದು.

ಎ) ಚಿರಂಜೀವಿ　　ಬಿ) ಪ್ರೀತಿಯ

ಸಿ) ನಲ್ಮೆಯ　　ಡಿ) ಮಾತೃಶ್ರೀ

ಉ. ______________________________

5. ಚಿಕ್ಕಮ್ಮನವರಿಗೆ ಪತ್ರ ಬರೆಯುವಾಗ ಬಳಸುವ ಗೌರವಸೂಚಕ ಪದ ಇದು.

ಎ) ಚಿರಂಜೀವಿ　　ಬಿ) ಮಾತೃಶ್ರೀ ಸಮಾನರಾದ

ಸಿ) ಮಾತೃಶ್ರೀ　　ಡಿ) ತೀರ್ಥರೂಪ

ಉ. ______________________________

**ಈ. ಆವರಣದಲ್ಲಿನ ಪದಗಳನ್ನು ಬಳಸಿ ಬಿಟ್ಟ ಸ್ಥಳ ತುಂಬಿರಿ.**

| ಖಾಸಗಿ ಪತ್ರ, ವ್ಯವಹಾರಿಕ ಪತ್ರ, ಕಛೇರಿಪತ್ರ, ಪ್ರಕಟಣೆ, ಜಾಹೀರಾತು |
|---|

1. ಗೆಳೆಯನಿಗೆ ಬರೆದ ಪತ್ರ : ______________
2. ತಹಶೀಲ್ದಾರರಿಗೆ ಬರೆದ ಪತ್ರ : ______________
3. ಪುಸ್ತಕದ ಅಂಗಡಿಮಾಲೀಕರಿಗೆ ಬರೆದ ಪತ್ರ : ______________
4. ಸಾರ್ವಜನಿಕರಿಗೆ ನೀಡಿದ ಸೂಚನೆಗಳು : ______________
5. ವಸ್ತುಗಳನ್ನು ಮಾರುಕಟ್ಟೆಗೆ ಪರಿಚಯಿಸುವ ಪತ್ರ : ______________

**ಉ. ನಿಮ್ಮ ಅಜ್ಜಿಯ ಊರಿನಲ್ಲಿ ನಡೆಯುವ ಜಾತ್ರೆಗೆ ಹೋಗಲು ಅನುಮತಿ ಕೋರಿ, ನಿಮ್ಮ ಶಾಲೆಯ ಮುಖ್ಯ ಶಿಕ್ಷಕರಿಗೆ ಒಂದು ಪತ್ರ ಬರೆಯಿರಿ.**

ಊ. ನಿಮ್ಮ ಶೈಕ್ಷಣಿಕ ಪ್ರಗತಿ ಕುರಿತು ನಿಮ್ಮ ಅಕ್ಕನಿಗೊಂದು ಪತ್ರ ಬರೆಯಿರಿ.

**ಋ. 'ಶ್ರೀ ರಾಮಾಯಣಂ' ಪುಸ್ತಕವನ್ನು ನಿಮ್ಮ ಶಾಲಾ ಗ್ರಂಥಾಲಯಕ್ಕೆ ಅಂಚೆ ಮೂಲಕ ಕಳುಹಿಸುವಂತೆ ಕೋರಿ 'ಚಂದನ ಪ್ರಕಾಶನ' ಧಾರವಾಡ ಇವರಿಗೊಂದು ಪತ್ರ ಬರೆಯಿರಿ.**

ಎ. ನಿಮ್ಮ ಶಾಲಾ ಸೌಲಭ್ಯಗಳನ್ನು ಮತ್ತು ಶೈಕ್ಷಣಿಕ ಪ್ರಗತಿ ಸಾಧನೆಯನ್ನು ತಿಳಿಸುತ್ತಾ, ಪ್ರಜಾವಾಣಿ ಪತ್ರಿಕೆಗೆ ಒಂದು ಜಾಹೀರಾತು ಪತ್ರ ಸಿದ್ಧಪಡಿಸಿ.

ಎ. ನಿಮ್ಮೂರಿಗೆ ಕುಡಿಯುವ ನೀರಿನ ಸೌಲಭ್ಯ ನೀಡುವಂತೆ ಕೋರಿ ಸಂಬಂಧಿಸಿದ ಜನಪ್ರತಿನಿಧಿಗಳಿಗೊಂದು ಮನವಿ ಪತ್ರ ಬರೆಯಿರಿ.

ಐ. ನಿಮ್ಮ ಶಾಲೆಯಲ್ಲಿ ಆಚರಿಸಿದ ಅಂಬೇಡ್ಕರ್ ಜನ್ಮದಿನದ ಕಾರ್ಯಕ್ರಮ ವಿವರ ಪ್ರಕಟಿಸಲು ಕೋರಿ 'ವಿಜಯವಾಣಿ' ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕಥೆಗಳನ್ನು ಆಲಿಸಿ ಸೂಕ್ತವಾಗಿ ಅರ್ಥೈಸುವೆ. | | | |
| 2. | ಅಪರಿಚಿತ ಘಟನೆ / ಕಥೆಗಳನ್ನು ತಾರ್ಕಿಕವಾಗಿ ಪೂರ್ಣಗೊಳಿಸುವೆ. | | | |
| 3. | ಸರಳ ಟಿಪ್ಪಣಿಯನ್ನು ದೋಷಗಳಿಲ್ಲದೆ ಬರೆಯುವೆ. | | | |

**ಶಿಕ್ಷಕರ ಅಭಿಪ್ರಾಯ:**

| | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |

# 9. ಕಿರುಪರೀಕ್ಷೆ –2

**ಅ) ಈ ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಕುವೆಂಪು ಅವರ ಪೂರ್ಣ ಹೆಸರು ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ. ಕುವೆಂಪು ಎಂಬುದು ಇವರ ಸಂಕ್ಷಿಪ್ತನಾಮ. 29.12.1904 ರಂದು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಜನಿಸಿದರು. ಇವರ ಕೃತಿಗಳು ಅನೇಕ. "ಶ್ರೀರಾಮಾಯಣದರ್ಶನಂ" ಮಹಾಕಾವ್ಯ. ಚಿತ್ರಾಂಗದ, ಕೊಳಲು, ಪ್ರೇಮಕಾಶ್ಮೀರ ಮೊದಲಾದ ಕವನ ಸಂಕಲನಗಳನ್ನು. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಇವರ ಜನಪ್ರಿಯ ಕಾದಂಬರಿಗಳನ್ನು. ರಕ್ತಾಕ್ಷಿ, ಬಲಿದಾನ, ಬೆರಳ್‌ಗೆ ಕೊರಳ್, ಯಮನ ಸೋಲು ಮೊದಲಾದ ಹಲವಾರು ನಾಟಕಗಳನ್ನು ರಚಿಸಿದ್ದಾರೆ. ಇದಲ್ಲದೆ ವಿಮರ್ಶೆ, ವೈಚಾರಿಕತೆ, ಸಾಹಿತ್ಯ–ಹೀಗೆ ವಿವಿಧ ಕ್ಷೇತ್ರಗಳಲ್ಲಿ ಇವರು ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ.

ಇವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿಗಳು ದೊರೆತಿದ್ದು, ಇವರ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯಕ್ಕೆ "ಜ್ಞಾನಪೀಠ ಪ್ರಶಸ್ತಿ" ದೊರೆತಿದೆ. "ಪಂಪ ಪ್ರಶಸ್ತಿ" "ಕರ್ನಾಟಕ ರತ್ನ" ಪ್ರಶಸ್ತಿಗಳೂ ಕೂಡ ಇವರಿಗೆ ಸಂದಿವೆ.

**ಪ್ರಶ್ನೆಗಳು:**

1. ಕುವೆಂಪುರವರ ಪೂರ್ಣ ಹೆಸರೇನು?

______________________________

2. ಕುವೆಂಪುರವರು ಎಂದು ಜನಿಸಿದರು?

______________________________

3. ಕುವೆಂಪುರವರ ಪ್ರಮುಖ ಕವನ ಸಂಕಲನಗಳು ಯಾವುವು?

______________________________

4. ಕುವೆಂಪುರವರ ಜನಪ್ರಿಯ ಕಾದಂಬರಿಗಳು ಯಾವುವು?

______________________________

5. ಕೆ.ವಿ. ಪುಟ್ಟಪ್ಪನವರ ಮುಖ್ಯ ನಾಟಕಗಳು ಯಾವುವು?

______________________________

6. ಕೆ.ವಿ.ಪುಟ್ಟಪ್ಪನವರಿಗೆ ದೊರೆತಿರುವ ಪ್ರಶಸ್ತಿಗಳು ಯಾವುವು?

---

7. ಕುವೆಂಪುರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ?

---

**ಆ) ಈ ದೇಶಭಕ್ತಿ ಗೀತೆಯನ್ನು ಹಾಡಿ. ನಂತರ ಇದರ ಸಾರಾಂಶವನ್ನು ಬರೆಯಿರಿ.**

## ನನ್ನ ದೇಶ ನನ್ನ ಜನ

ನನ್ನ ದೇಶ ನನ್ನ ಜನ
ನನ್ನ ಮಾನ, ಪ್ರಾಣ ಧನ
ತೀರಿಸುವೆನೆ ಅದರ ಋಣ
ಈ ಒಂದೇ ಜನ್ಮದೀ?

ನೂರು ಭಾವ, ಭಾಷೆ ನೆಲೆ
ನೂರು ಬಣ್ಣ, ವೇಷ ಕಲೆ
ಸ್ವಚ್ಛಂದದ ಹಕ್ಕಿಗಳೆ
ನಮ್ಮ ಹಾಡು ಬದುಕಲು ॥

ಪ್ರಾಚೀನವ ತಿಕ್ಕಿ ತೊಳೆ
ವರ್ತಮಾನ ಜೀವಕಳೆ
ಉಕ್ಕೇರಲಿ ಬಾಳ ಹೊಳೆ
ಆ ಭವಿಷ್ಯದೊಡಲಿಗೆ ॥

ಮೈ ಕೊಡವಿದೆ ಮೂಕ ಜನ
ಕೈ ಹಿಡಿಯಿರಿ ನಾಕು ಚಣ
ಎದ್ದೇಳಲಿ ಎಲ್ಲ ಗುಣ
ಆ ಸಮೃದ್ಧ ಬಾಳಿಗೆ ॥

**– ಚೆನ್ನವೀರ ಕಣವಿ.**

**ಸಾರಾಂಶ:**

**ಶಿಕ್ಷಕರ ಅಭಿಪ್ರಾಯ:**

| **ಅತ್ಯುತ್ತಮ** | | **ಉತ್ತಮ** | | **ಸಾಧಾರಣ** | |
|---|---|---|---|---|---|

# 10. ಪ್ರಬಂಧ ರಚನೆ

ಹೊಸ ಕನ್ನಡ ಸಾಹಿತ್ಯದಲ್ಲಿ 'ಲಲಿತ ಪ್ರಬಂಧ'ಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಒಂದು ನಿರ್ದಿಷ್ಟ ವಸ್ತು, ವಿಷಯ, ಘಟನೆ, ಸನ್ನಿವೇಶ ಇತ್ಯಾದಿ ಸಂಗತಿಗಳನ್ನು ಕುರಿತು ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಅಭಿಪ್ರಾಯಗಳನ್ನು ನಿರೂಪಿಸುವ ಒಂದು ವ್ಯವಸ್ಥಿತ ಬರಹವೇ ಪ್ರಬಂಧ. ಪ್ರಬಂಧ ಮಾದರಿಯಲ್ಲಿ ಹಾಸ್ಯ ಪ್ರಬಂಧ, ಸಂಶೋಧನಾ ಪ್ರಬಂಧ, ವೈಜ್ಞಾನಿಕ ಪ್ರಬಂಧ, ಹರಟೆ–ಹೀಗೆ ಹಲವು ಶೈಲಿಗಳಿವೆ.

ಸಾಮಾನ್ಯವಾಗಿ ಪ್ರಬಂಧದಲ್ಲಿ ವಿಚಾರದ ಏಕತೆ, ವಿಷಯ ಸಂಗ್ರಹ, ಕ್ರಮಬದ್ಧತೆ, ವಿಷಯ ವಿಸ್ತಾರ, ವೈವಿಧ್ಯತೆ, ಸರಳಶೈಲಿ, ಸಂಕ್ಷಿಪ್ತತೆ, ವೈಯಕ್ತಿಕತೆ, ಸುಸಂಬದ್ಧತೆ–ಹೀಗೆ ಸುಲಭ ಸಂವಹನಾ ಶೈಲಿಯ ಲಿಖಿತ ಅಭಿವ್ಯಕ್ತಿ ರೂಪವೇ ಪ್ರಬಂಧ.

ಪ್ರಬಂಧ ರಚಿಸಲು ಸಂಗ್ರಹಿಸಿದ ಮಾಹಿತಿಯನ್ನು ಪ್ರಸ್ತಾವನೆ (ಪೀಠಿಕೆ), ವಿಷಯ ನಿರೂಪಣೆ, ವಿವರಣೆ ಹಾಗೂ ಮುಕ್ತಾಯ (ಉಪಸಂಹಾರ) ಹಂತಗಳಲ್ಲಿ ಪ್ರಸ್ತುತಪಡಿಸುವುದು ಸೂಕ್ತ.

**(i) ಪೀಠಿಕೆ :** ಪ್ರಬಂಧ ರಚನೆಯ ಪ್ರಾರಂಭದಲ್ಲಿ ವಿಷಯವನ್ನು ಕುರಿತು ಅದರ ಅರ್ಥವನ್ನು ಉದ್ದೇಶಿಸಿ ಕೆಲವು ಮಾತುಗಳನ್ನು ಹೇಳಬೇಕು. ಇದನ್ನು ವಿಷಯಪ್ರವೇಶವೆಂದೂ ಕರೆಯಬಹುದು. ಈ ಮಜಲು ಎರಡೂ ಮೂರು ವಾಕ್ಯಗಳನ್ನು ಮೀರಬಾರದು.

**(ii) ವಿಷಯ ಬೆಳವಣಿಗೆ :** ಪ್ರಬಂಧ ರಚನೆಗೆ ನೀಡಿರುವ ವಿಷಯವು ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿರುತ್ತದೆ. ಅಂದರೆ ಯಾವ ಅಂಶವಾದ ನಂತರ ಯಾವ ಅಂಶವನ್ನು ಹೇಳಬೇಕು. ಎಂಬುದನ್ನು ಮನಸ್ಸಿನಲ್ಲಿ ನಿರ್ಧಾರ ಮಾಡಿಕೊಳ್ಳಬೇಕು. ವಿಷಯದ ಸಮರ್ಥನೆಗೆ ಪೂರಕವಾದ ಒಂದೊಂದು ಅಂಶಕ್ಕೂ ಒಂದೊಂದು ವಾಕ್ಯವೃಂದ (paragraph) ವನ್ನು ರೂಪಿಸುವುದು ಹೆಚ್ಚು ಸೂಕ್ತ. ಇವು ಅತಿಯೂ ಆಗಬಾರದು; ಇಲ್ಲದೆಯೂ ಇರಬಾರದು.

**(iii) ಮುಕ್ತಾಯ:** ಪ್ರಬಂಧದ ಅಂತಿಮ ಚರಣವೇ ಮುಕ್ತಾಯ. (ಉಪಸಂಹಾರ) ಸರಳ ಹಾಗೂ ಸೂಕ್ತವೂ ಆಗಿರಬೇಕು. ವಿಷಯವನ್ನು ಕುರಿತಾದ ನಿಮ್ಮ ನಿಲುವೇನು? ಎಂಬುದನ್ನು ತಿಳಿಸುವುದೇ ಮುಕ್ತಾಯ. ನೀವು ವಿಷಯದ ಪರವೇ? ಅಥವಾ ವಿರೋಧವೇ? ಅದಕ್ಕೆ ಸಮರ್ಥನೆ ಏನು? –ಈ ಪ್ರಶ್ನೆಗಳಿಗೆ ಸ್ಥೂಲವಾದ ಉತ್ತರಗಳನ್ನು ಮೂರು ನಾಲ್ಕು ವಾಕ್ಯಗಳಲ್ಲಿ ವಿವರಿಸಿದರೆ ಸಾಕು.

ಸಾಮಾನ್ಯವಾಗಿ ಪೀಠಿಕಾ ಪ್ರಕರಣ ಮತ್ತು ಮುಕ್ತಾಯ ಪ್ರಕರಣಗಳೆರಡೂ ಹೆಚ್ಚೂ ಕಡಿಮೆ ಒಂದೇ ವಿಸ್ತಾರವನ್ನು ಹೊಂದಿರುವುದು ಅಪೇಕ್ಷಣೀಯ. ಬೆಳವಣಿಗಾಗಿ ಪ್ರಕರಣವು ಇವೆರಡರ ಎರಡರಷ್ಟಿದ್ದರೆ, ಅಂತಹ ಪ್ರಬಂಧಗಳು ಹೆಚ್ಚು ಆಕರ್ಷಣೀಯವಾಗಿರುತ್ತವೆ.

ಅ) ಈ ಕೆಳಗಿನ ವಿಷಯ ಕುರಿತು ಒಂದು ಪುಟ ಮೀರದಂತೆ ಪ್ರಬಂಧ ಬರೆಯಿರಿ. ಅನಂತರ ತರಗತಿಯಲ್ಲಿ ಓದಿರಿ.

1. ಹಳ್ಳಿಯ ಜೀವನದಿಂದಾಗುವ ಅನುಕೂಲಗಳು

**2. ನೀರಿನ ಸದ್ಬಳಕೆ ಹೇಗೆ ಮಾಡಬಹುದು?**

**3. ಕಂಪ್ಯೂಟರ್‌ನ ಉಪಯೋಗಗಳು.**

# 11. ಭಾಷಾ ವಿನೋದ

**ಅ) ಕೆಳಗಿನ ಸುಳುಹುಗಳ ಸಹಾಯದಿಂದ ಪದಬಂಧವನ್ನು ಪೂರ್ಣಗೊಳಿಸಿ. ಆವರಣದಲ್ಲಿರುವುದು ಪದಗಳ ಒಟ್ಟು ಅಕ್ಷರಗಳನ್ನು ಸೂಚಿಸುತ್ತದೆ.**

| | | | | | | | |
|---|---|---|---|---|---|---|---|
| 1 ಬೀ | 2 | 3 ಬ | | 4 ಮ | | 5 ಪ | |
| 6 ಸ | | | | | | | |
| | | | | | 7 ಹ | | 8 ತೆ |
| | | 9 ರ | 10 | | | | |
| 11 ವಿ | | | | | | | |
| 12 | | | 13 ಯ | | | 14 ರೆ | |

| ಎಡದಿಂದ ಬಲಕ್ಕೆ | ಮೇಲಿನಿಂದ ಕೆಳಕ್ಕೆ |
|---|---|
| 1. ಅಕ್ಬರದ ಆಸ್ಥಾನದಲ್ಲಿದ್ದ ಎಲ್ಲ ಬಲ್ಲ ಪಂಡಿತ(4) | 1. ಗಾಳಿ ಬೀಸಿಕೊಳ್ಳುವ ಸಾಧನ(4) |
| 4. ಪಕ್ಷಿಯ ಮರಿ (4) | 2. ಸುಂದರವಾದ, ಆಕರ್ಷಕವಾದ(4) |
| 5. ಹಕ್ಕಿಗೆ ಇನ್ನೊಂದು ಪದ(2) | 3. ಬಕಬಕನೆ ತಿನ್ನುವ ಅಸುರ(4) |
| 6. ಒಂದೇ ಕಾಲದಲ್ಲಿರುವವನು(5) | 4. ಇಬ್ಬರ ನಡುವೆ ಅಸಮಾಧಾನ(4) |
| 7. ಇದರಲ್ಲಿ ದೀಪವನ್ನು ಹಚ್ಚುತ್ತೇವೆ(3) | 5. ಒಂದು ಸ್ಥಳದಿಂದ ಇನ್ನೊಂದು ಕಡೆಗೆ ಪ್ರಯಾಣ(3) |
| 9. ಸೂರ್ಯನ ಇನ್ನೊಂದು ಹೆಸರು(2) | 7. ಒಳ್ಳೆಯದಾಗಲೆಂದು ಆಶೀರ್ವದಿಸುವುದು(3) |
| 12. ಧರ್ಮಕ್ಕೆ ಹೆಸರಾದ ಪಾಂಡವರ ರಾಜ(4) | 8. ಹೀಯಾಳಿಸಿ ಬೈಯುವುದು (3) |
| 13. ನರಕದ ಅಧಿಪತಿ (2) | 10. ಜಯವನ್ನು ಸಾಧಿಸುವುದು (3) |
| 14. ಪಕ್ಷಿಯ ಗರಿ (2) | 11. ಬಗೆ ಅಥವಾ ರೀತಿ (2) |

**ಆ. ಆವರಣದಲ್ಲಿ ಕೊಟ್ಟಿರುವ ಅಕ್ಷರಗಳನ್ನು ಆಯ್ದು ಖಾಲಿ ಇರುವ ಚೌಕದಲ್ಲಿ ಬರೆದು ಅರ್ಥಪೂರ್ಣವಾದ ಪದಗಳನ್ನು ಮಾಡಿ. [ಭಾ, ತ್ವಾ, ತಿ, ಮು, ಸು, ನೆ, ಮ, ಭ]**




**ಇ. ಕೆಳಗಿನ ಚೌಕಗಳಲ್ಲಿರುವ ಅಕ್ಷರಗಳನ್ನು ಉಪಯೋಗಿಸಿ ಪದಗಳನ್ನು ರಚಿಸಿರಿ. (ಒಂದು ಅಕ್ಷರವನ್ನು ಎಷ್ಟು ಸಾರಿ ಬೇಕಾದರೂ ಬಳಸಬಹುದು)**

| | | | |
|---|---|---|---|
| ಸೊ | ಬ | ಬೆ | ಗು |
| ಸು | ಗ | ಕೊ | ದ |
| ವ | ಡ | ಳ | ಲ |
| ಣಿ | ತ | ಕ | ಲಿ |
| ಲೆ | ಉ | ರ | ನ |

**ಮಾದರಿ : ಸೊಗಸು**

______ ______ ______

______ ______ ______

______ ______ ______

______ ______ ______

______ ______ ______

**ಈ. ಶಾಲೆಗೆ ಸಂಬಂಧಪಡುವ ಪದಗಳನ್ನು ಬರೆಯಿರಿ.**

**ಮಾದರಿ:**

**ಪುಸ್ತಕ**

______ ______ ______

______ ______ ______

______ ______ ______

______ ______ ______

______ ______ ______



**ಉ. ಕೆಳಗಿನ ಪದ್ಯವನ್ನು ಓದಿ. ಇದೊಂದು ಪ್ರಾಸಗಳಿಂದ ಕೂಡಿದ ಪದ್ಯ. ಇದರಲ್ಲಿರುವ ಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.**



ಅಲ್ಲಿ ನೋಡು ಏನಿದೆ?
ಬಾನಿನಗಲ ಹರಡಿದೆ ।
ಕಣ್ಗಳನ್ನೆಲ್ಲಾ ಸೆಳೆದಿದೆ
ಮನವನ್ನೆಲ್ಲಾ ತಣಿಸಿದೆ ॥

ಬಣ್ಣ ಅದಕೆ ಮೂರು
ಕೇಸರಿ ಬಿಳಿ ಹಸಿರು ।
ಅದುವೆ ದೇಶದ ಉಸಿರು
ತ್ರಿವರ್ಣ ಧ್ವಜವೇ ಹೆಸರು ॥

ನಡುವೆ ಇರುವ ಚಕ್ರವು
ಅದೇ ಧರ್ಮದ ಸಂಕೇತವು ।
ಎಲ್ಲ ಜನರಿಗೆ ಸ್ವತಂತ್ರವು
ಅದುವೆ ಭಾರತ ದೇಶವು ॥

ಧೀರ ಕಲಿಗಳ ನಾಡಲಿ
ಶಾಂತಿ ಪ್ರಿಯರ ಬೀಡಲಿ ।
ಎಲ್ಲೆಡೆ ಧ್ವಜವೇ ಕಾಣಲಿ
ಭಾರತೀಯರೆಲ್ಲರ ಕಣ್ಣಲಿ ॥

–ಹೆಬ್ಬಳಲು ಶ್ರೀಧರ್

**ಆಶಯ:** ತ್ರಿವರ್ಣ ಧ್ವಜ ನಮ್ಮ ರಾಷ್ಟ್ರದ ಗೌರವದ ಪ್ರತೀಕ. ಭಾರತ ದೇಶವನ್ನು ಪ್ರತಿನಿಧಿಸುವ ಧ್ವಜ. ವೀರರೂ, ಶೂರರೂ, ಶಾಂತಿಪ್ರಿಯರೂ ಇದ್ದ ಈ ಸ್ವತಂತ್ರ ಭಾರತದ ಪ್ರಜೆಗಳಾದ ನಾವು ಧ್ವಜವನ್ನು ಗೌರವಿಸೋಣ–ಎಂಬುದು ಪದ್ಯದ ಆಶಯ.

| ಪ್ರಾಸ ಪದಗಳು: | ಸೆಳೆದಿದೆ – ತಣಿಸಿದೆ | |
|---|---|---|
| | | |
| | | |
| | | |
| | | |

ಊ. ಕೆಳಗಿನ ಚಿತ್ರವನ್ನು ಗಮನವಿಟ್ಟು ವೀಕ್ಷಿಸಿ, ಇದರ ಬಗ್ಗೆ ಒಂದು ಸಣ್ಣ ಪ್ರಬಂಧವನ್ನು ಬರೆಯಿರಿ.



**ಋ. ಕೆಳಗಿನ ಪದ್ಯವನ್ನು ಗಮನವಿಟ್ಟು ಓದಿ, ಸಾಧ್ಯವಾದಷ್ಟು ಇದರ ಮೇಲೆ, ಪ್ರಶ್ನೆಗಳನ್ನು ರಚಿಸಿ. ಆ ಪ್ರಶ್ನೆಗಳಿಗೆ ನೀವೇ ಉತ್ತರ ಬರೆಯಿರಿ.**

## ಕೊಳ್ಳಿರಿ ತಾಜಾ ತರಕಾರಿ




ಕೊಳ್ಳಿರಿ ತಾಜಾ ತರಕಾರಿ
ಆರೋಗ್ಯಕ್ಕೆ ಹಿತಕಾರಿ ॥

ಸಾರಿಗೆ ಬೇಕು ತೆಂಗಿನಕಾಯಿ
ಖಾರಕೆ ಬೇಡವೆ ಮೆಣಸಿನಕಾಯಿ
ಹುಳಿಹುಳಿಯಾದ ಮಾವಿನಕಾಯಿ
ಸಿಹಿರೋಗಕ್ಕೆ ಹಾಗಲಕಾಯಿ
ಕೊಳ್ಳಿರಿ ತಾಜಾ ತರಕಾರಿ ॥






ಉಪ್ಪಿಟ್ಟಿಗೆ ಬೇಕು ಎಲೆಕೋಸು
ಕೂಟಿಗೆ ಹಾಕಿ ಗೆಡ್ಡೆಕೋಸು
ಗೋಬಿ ಮಂಚೂರಿಗೆ ಹೂಕೋಸು
ತನ್ನಿರಿ ಈಗಲೇ ಚಿಲ್ಲರೆ ಕಾಸು
ಕೊಳ್ಳಿರಿ ತಾಜಾ ತರಕಾರಿ ॥
ತಿನ್ನುವುದನ್ನು ಮರೆತೀರಿ!




ವಿವಿಧ ತರಕಾರಿ, ಹಣ್ಣುಗಳು ಆರೋಗ್ಯಕ್ಕೆ ಸಹಕಾರಿ

– ಅಶ್ವಿನಿ.ಎಸ್.

**ಮಾದರಿ:**

| |
|---|
| **ಪ್ರಶ್ನೆ 1 :** ಆರೋಗ್ಯಕ್ಕೆ ಯಾವುದು ಹಿತಕಾರಿ? |
| **ಉತ್ತರ:** ತಾಜಾ ತರಕಾರಿಗಳು ಆರೋಗ್ಯಕ ಹಿತಕಾರಿಯಾಗಿವೆ. |

| |
|---|
| **ಪ್ರಶ್ನೆ 2 :** |
| **ಉತ್ತರ:** |
| **ಪ್ರಶ್ನೆ 3 :** |
| **ಉತ್ತರ:** |
| **ಪ್ರಶ್ನೆ 4 :** |
| **ಉತ್ತರ:** |
| **ಪ್ರಶ್ನೆ 5 :** |
| **ಉತ್ತರ:** |

**(2) ಕೆಳಗಿನ ಪದಗಳ ಅರ್ಥವನ್ನು ಬರೆಯಿರಿ.**

| | |
|---|---|
| 1. ತಾಜಾ | = |
| 2. ಸಿಹಿರೋಗ | = |
| 3. ಚಿಲ್ಲರೆ ಕಾಸು | = |
| 4. ಹಿತಕಾರಿ | = |
| 5. ಸಹಕಾರಿ | = |
| 6. ಆರೋಗ್ಯ | = |

**(3) ಪದ್ಯದಲ್ಲಿ ಬಂದಿರುವ ತರಕಾರಿಗಳನ್ನು ಪಟ್ಟಿಮಾಡಿ.**

| | | |
|---|---|---|
| | | |
| | | |
| | | |

**ಎ. ಕೆಳಗಿನ ಪದ್ಯವನ್ನು ಓದಿ, ಇದರ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.**

## ನನಗೂ ಒಂದು ರೊಬೋ ಸಿಕ್ಕರೆ!

ಹೇಳಿದ ಹಾಗೆ ಕೇಳುವ ರೊಬೋ
ಬರುತಿಹುದಂತೆ ಮಾರ್ಕೆಟ್‌ಗೆ
ದುಡ್ಡು ಕಾಸು ಎಷ್ಟೋ ಹೇಗೋ
ಸಿಗಲಿ ಒಂದು ನನ್ನ ಕೈಗೆ ॥



ಬಟ್ಟೆ ಪಾತ್ರೆ ಥಳಥಳಗುಟ್ಟಿಸಿ
ತೋರುವೆ ಜಾದು ಅಮ್ಮನಿಗೆ ॥
ಹಬ್ಬದ ಅಡುಗೆ ಚಕ್ಕನೆ ಮಾಡಿಸಿ
ಅಚ್ಚರಿ ಕೊಡುವೆ ಅಪ್ಪನಿಗೆ ॥

ರೊಬೋ ತೋರಿಸಿ ಧೈರ್ಯವ ತುಂಬುವ
ಪುಟಾಣಿ ಪುಕ್ಕಲು ತಮ್ಮನಿಗೆ ॥
ಹಗಲು ಇರುಳು ನಲಿಯುತ ಕುಣಿಯುವೆ
ಹೆದರುವೆನೇನು ಗುಮ್ಮನಿಗೆ?

ಗೆಳೆಯರಿಗೆಲ್ಲಾ ಬೀಗುತ ಹೇಳುವೆ
ರೊಬೋ ನನ್ನಯ ಸಖನೆಂದು ।
ಕಳ್ಳರ ಸುಳ್ಳರ ಮೂಳೆಯ ಮುರಿಯುವೆ
ಮೋಸಕೆ ಬಾಗೆನು ನಾನೆಂದು॥

ದೂರದ ದಾರಿ ಅಜ್ಜಿಯ ಊರಿಗೆ
ಆದರು ನಮಗೆ ಕ್ಷಣ ಮಾತ್ರ ॥
ಸಾಧನೆ ಮಾಡುವೆ ಅಜ್ಜನ ಹಾಗೆ
ಮೊದಲು ಕೆಲಸ ನನ್ನ ಸೂತ್ರ ॥

**–ತಾ.ಶ್ರೀ ಗುರುರಾಜ್**

________________________________________

**ಸಾರಾಂಶ:**

**ಈ ಪದ್ಯದಲ್ಲಿರುವ ವಿರುದ್ಧ ಪದಗಳನ್ನು ಪಟ್ಟಿಮಾಡಿರಿ.**

**ಮಾದರಿ:**

| | | |
|---|---|---|
| ದೂರ × ಹತ್ತಿರ | | |
| | | |
| | | |

**(2) ಕೆಳಗಿನ ಪದಗಳ ಅರ್ಥವನ್ನು ಬರೆಯಿರಿ.**

| |
|---|
| 1. ರೊಬೋ : |
| 2. ಮಾರ್ಕೆಟ್ : |
| 3. ಜಾದು : |
| 4. ಗುಮ್ಮ : |

**ಎ. ಕೆಳಗಿನ ಪದ್ಯವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ..**

## ನಮ್ಮೂರ ಶಾಲೆ




ಬನ್ನಿರೈ ಬನ್ನಿರೋ ಕೂಡಿ ಹೋಗೋಣ
ಜ್ಞಾನದ ಆಲಯದಿ ಕಲಿಯೋಣ ॥

ಬೇರೆ ಬೇರೆ ಮನೆಗಳಿಂದ ಬರುವೆವು ನಾವು
ವಿಧ ವಿಧದ ಜ್ಞಾನವನ್ನು ಕಲಿವೆವು ದಿನವು ।
ಮೇಲು-ಕೀಳೆಂಬ ಭೇದ ಮರೆಯುವ ನಾವು
ನಾವೆಲ್ಲಾ ಒಂದೇ ಎನ್ನಿರಿ ನೀವು ॥

ದೊರೆಕಿಹುದು ಗುರುವಿನ ಮಾರ್ಗದರ್ಶನ
ಪಾಠದಲ್ಲೇ ಮೂಡಿಸುವರು ವಿಶ್ವದರ್ಶನ ।
ತೊಳೆಯುವರು ಬಾಳಿನ ಕತ್ತಲೆಯನ್ನು
ಬೆಳಗುವರು ಜ್ಞಾನದ ದೀವಿಗೆಯನ್ನು ॥

ತಣಿಸುವರು ನಮ್ಮಲಿರುವ ಜ್ಞಾನದ ದಾಹ
ಬೆಳೆಸುವರು ನಮ್ಮಲ್ಲಿ ಪುಸ್ತಕ ಮೋಹ ।
ಎಲ್ಲದಕ್ಕೂ ಸಿಗುತಿದೆ ಮನೆಯ ಪ್ರೋತ್ಸಾಹ
ದಿನದಿನವೂ ಹೆಚ್ಚುತಿದೆ ನಮ್ಮಯ ಉತ್ಸಾಹ॥

**1. ಈ ಪದ್ಯದ ಮೂಲ ಆಶಯವೇನು?**

| |
|---|
| |
| |

**2. ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

| | | |
|---|---|---|
| ಜ್ಞಾನ × | ಮೇಲು × | ಕತ್ತಲೆ × |
| ಉತ್ಸಾಹ × | ಮೋಹ × | ಬೆಳಗು × |

**3. ನಿಮ್ಮ ಶಾಲೆಯ ಬಗ್ಗೆ ಒಂದು ಪುಟ್ಟ ಪದ್ಯವನ್ನು ರಚಿಸಿ.**

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಪದ್ಯ / ಕವನಗಳಿಗೆ ಸಾರಾಂಶ ಬರೆಯುವೆ. | | | |
| 2. | ಪದಭಂಡಾರವನ್ನು ಹೆಚ್ಚಿಸುವ ಚಟುವಟಿಕೆಗಳನ್ನು ಮಾಡುವೆ. | | | |
| 3. | ವ್ಯಾಕರಣ ದೋಷವಿಲ್ಲದೆ ಪ್ರಬಂಧ ಬರೆಯುವೆ. | | | |

**ಶಿಕ್ಷಕರ ಅಭಿಪ್ರಾಯ:**

| | | | | | |
|---|---|---|---|---|---|
| **ಅತ್ಯುತ್ತಮ** | | **ಉತ್ತಮ** | | **ಸಾಧಾರಣ** | |

# 12. ಕಿರುಪರೀಕ್ಷೆ –3

**ಅ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಪ್ರಬಂಧ ಎಂದರೇನು? ಅದರ ವಿವಿಧ ಹಂತಗಳಾವುವು?

______________________________

______________________________

______________________________

______________________________

2. ಕೆಳಗಿನ ಪದಗಳ ಅರ್ಥವನ್ನು ನಿಘಂಟಿನ ಸಹಾಯದಿಂದ ಬರೆಯಿರಿ.

(ಅ) ಕಲಿಗಳು = ______________________________

(ಆ) ಧ್ವಜ = ______________________________

(ಇ) ಸಂಕೇತ = ______________________________

(ಈ) ತಣಿಸು = ______________________________

(ಉ) ಆಲಯ = ______________________________

3. 'ಪ್ರಾಸ' ಎಂದರೇನು? ಎರಡು ಉದಾಹರಣೆ ಕೊಡಿ.

______________________________

______________________________

______________________________

4. ನಿಮ್ಮ ಮನೆಯಲ್ಲಿ ಬಳಸುವ ತರಕಾರಿಗಳನ್ನು ಪಟ್ಟಿಮಾಡಿ.

______________________________

______________________________

______________________________

5. ಉಪ್ಪಿಟ್ಟನ್ನು (ಖಾರಬಾತ್) ಸಿದ್ದಪಡಿಸಲು ಬಳಸುವ ಸಾಮಗ್ರಿಗಳನ್ನು ಪಟ್ಟಿಮಾಡಿ.

______________________________

______________________________

______________________________

ಆ) ಕೆಳಗಿನ ಚಿತ್ರದ ಬಗ್ಗೆ ನಿಮಗನಿಸಿದ್ದನ್ನು ಬರೆಯಿರಿ.



ಇ) ಸ್ವರಚಿತ ಪದ್ಯವೊಂದನ್ನು ಬರೆಯಿರಿ.

ಈ) ಕೆಳಗಿನವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

1. ಬಾನು: ______ 2. ಗುರು: ______
3. ಪುಸ್ತಕ: ______ 4. ಇರುಳು: ______
5. ನಯನ: ______ 6. ದಾಹ: ______
7. ಬಾವಿ: ______ 8. ವಚನ: ______

## ಉ) ಕೆಳಗಿನ ಕಥಾ ಭಾಗವನ್ನು ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಮಧುರಾ ಎಂಬ ಪಟ್ಟಣದಲ್ಲಿ ಧರ್ಮಬುದ್ಧಿ ಮತ್ತು ದುಷ್ಟಬುದ್ಧಿ ಎಂಬ ಇಬ್ಬರು ವ್ಯಾಪಾರಿಗಳ ಮಕ್ಕಳಿದ್ದರು. ಅವರು ಜೊತೆಗೂಡಿ ವ್ಯಾಪಾರವನ್ನು ಮಾಡಿ ಬಹಳಷ್ಟು ಹಣವನ್ನು ಸಂಪಾದಿಸಿಕೊಂಡು ಮರಳಿ ತಮ್ಮ ಹುಟ್ಟೂರಿಗೆ ಬರುವಾಗ ಕತ್ತಲಾಗಿ ಮಧುರಾಪುರದ ಹೊರವಲಯದ ಮರಗಿಡಗಳ ಹೂದೋಟದಲ್ಲಿ ತಂಗಿದರು. ಆ ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುಷ್ಟ ಬುದ್ಧಿಗೆ ಈ ಹಣವನ್ನು ಸಮಾನವಾಗಿ ಹಂಚಿಕೊಳ್ಳೋಣ ಎಂದು ಹೇಳಿದಾಗ, ದುಷ್ಟಬುದ್ಧಿ ಕೆಟ್ಟ ಆಲೋಚನೆಯನ್ನು ಮಾಡಿ ಹೀಗೆಂದನು; ನಾವು ಈ ಹಣವನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರಲು ಸಾಧ್ಯವಿಲ್ಲ. ಹಾಗೇ ವ್ಯಾಪಾರಕ್ಕೆ ಹೋಗಲೂ ಸಾಧ್ಯವಾಗುವುದಿಲ್ಲ. ಆದ ಕಾರಣ ನಿನಗೆ ಮತ್ತು ನನಗೆ ಖರ್ಚುಮಾಡಲು ಬೇಕಾದಷ್ಟು ಹಣವನ್ನು ತೆಗೆದು ಉಳಿದ ಹಣವನ್ನು ಇಲ್ಲಿಯೇ ಬಚ್ಚಿಡೋಣ ಎಂದನು. ಇದನ್ನು ಕೇಳಿದ ಧರ್ಮಬುದ್ಧಿಯು ಅವನ ದುಷ್ಟ ಆಲೋಚನೆಯನ್ನು ಅರಿಯದೆ, ತನ್ನ ಸ್ನೇಹಿತನೆಂದು ತಿಳಿದು ಅದಕ್ಕೆ ಒಪ್ಪಿದನು. ಬಳಿಕ ಅಲ್ಲಿಯೇ ಒಂದು ಬೃಹದಾಕಾರದ ಅಶ್ವತ್ಥ ಮರದ ಕೆಳಗಡೆ ಹಣವನ್ನು ಹೂತಿಟ್ಟರು.

ಮರುದಿವಸ ಇಬ್ಬರೂ ನಗರವನ್ನು ಸೇರಿ ಸುಖವಾಗಿ ಜೀವನ ನಡೆಸುತ್ತಿದ್ದರು. ಹೀಗಿರಬೇಕಾದರೆ ದುಷ್ಟಬುದ್ಧಿ ಧರ್ಮಬುದ್ಧಿಯನ್ನು ವಂಚಿಸಿ ಹಣವನ್ನು ಹೂತಿಟ್ಟಿದ್ದ ಸ್ಥಳಕ್ಕೆ ಹೋಗಿ, ಹಣವೆಲ್ಲವನ್ನು ತೆಗೆದುಕೊಂಡು ಹೊಂಡವನ್ನು ಮೊದಲಿನಂತೆ ಸರಿಪಡಿಸಿದನು. ಕೆಲವು ದಿನಗಳ ನಂತರ ತಾನೆ ಧರ್ಮಬುದ್ಧಿಯಲ್ಲಿಗೆ ಬಂದು "ಖರ್ಚಿಗೆ ಹಣಬೇಕಾಗಿದೆ. ಹೂತಿಟ್ಟು ಸ್ಥಳಕ್ಕೆ ಹೋಗಿ ಸ್ವಲ್ಪ ಹಣವನ್ನು ತೆಗೆದುಕೊಳ್ಳೋಣ" ಎಂದು ಹೇಳಿದಾಗ ಇಬ್ಬರೂ ಜೊತೆಗೂಡಿ ಹೋದರು. ಅಲ್ಲಿ ಹೂತಿಟ್ಟಿದ್ದ ಹಣವನ್ನು ಕಾಣದೆ ಇದ್ದಾಗ ದುಷ್ಟಬುದ್ಧಿಯು ಇನ್ನು ಸುಮ್ಮನಿದ್ದರೆ ತನ್ನ ಮೇಲೆ ಅನುಮಾನ ಬರುವುದು ಎಂದು ಯೋಚಿಸಿ, "ಈ ಎಲ್ಲಾ ಹಣವನ್ನು ನೀನೇ ತೆಗೆದುಕೊಂಡೆಯ?" ಎಂದನು.

1. ಮಧುರಾ ಪಟ್ಟಣದಲ್ಲಿದ್ದ ವ್ಯಾಪಾರಿಗಳ ಮಕ್ಕಳ ಹೆಸರೇನು?

   ______________________________

2. ದುಷ್ಟಬುದ್ಧಿ ಮಾಡಿದ ಆಲೋಚನೆ ಯಾವುದು?

   ______________________________

3. ಯಾವ ಮರದ ಕೆಳಗೆ ಹಣವನ್ನು ಹೂತಿಟ್ಟಿದ್ದರು?

   ______________________________

4. "ಹಣವನ್ನು ಸಮವಾಗಿ ಹಂಚಿಕೊಳ್ಳೋಣ" ಎಂದು ಯಾರು ಹೇಳಿದರು?

   ______________________________

| ಶಿಕ್ಷಕರ ಅಭಿಪ್ರಾಯ: | | | | | |
|---|---|---|---|---|---|
| ಅತ್ಯುತ್ತಮ | | ಉತ್ತಮ | | ಸಾಧಾರಣ | |